**ಸ್ಥಾಪನೆ: 1963**

ಶ್ರೀ ಗ.ವಿ.ವ.ಟ್ರಸ್ಟಿನ

**ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ,**

**ಕೊಪ್ಪಳ–583231**

# ಗವಿ ಸಿರಿ

**(ವಾರ್ಷಿಕ ಸಂಚಿಕೆ 2018–19)**

# ಗವಿ ಸಿರಿ

## (ವಾರ್ಷಿಕ ಸಂಚಿಕೆ 2018–19)

**ಸಂಪಾದಕ ಮಂಡಳಿ**


ಅಧ್ಯಕ್ಷರು :

**ಪ್ರೊ. ಎಂ.ಎಸ್.ದಾದ್ಮಿ**

ಪ್ರಾಚಾರ್ಯರು

ಪ್ರಧಾನ ಸಂಪಾದಕರು :

**ಡಾ. ಬಸವರಾಜ ಪೂಜಾರ**

ಸದಸ್ಯರು :



ಪ್ರಕಾಶಕರು

ಶ್ರೀ ಗ.ವಿ.ವ.ಟ್ರಸ್ಟಿನ

**ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ,**

**ಕೊಪ್ಪಳ–583231**

Edited & Published by:Principal

**S.G.V.V. Trust's**

**Sri Gavisiddeshwar Arts, Science & Commerce**

Degree College, Koppal – 583231

Ph: 08539-220214

First Edition:2018

Copies : 1500

Pages : XVI+84

Used Paper : 70gsm Map litho paper

**ಗವಿ ಸಿರಿ (ವಾರ್ಷಿಕ ಸಂಚಿಕೆ 2018–19)**

ಪ್ರಕಾಶಕರು:

**ಶ್ರೀ ಗ.ವಿ.ವ.ಟ್ರಸ್ಟಿನ**

**ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯ**

**ಕೊಪ್ಪಳ–583231**

**ಫೋ: 08539–220214**

ಮೊದಲ ಮುದ್ರಣ : 2018


ಪ್ರತಿಗಳು : 1500

ಪುಟಗಳು : XVI+84

ಬಳಸಿದ ಕಾಗದ : 70 ಜಿಎಸ್‌ಎಂ ಮ್ಯಾಪಲಿಥೋ ಕಾಗದ

ಮುದ್ರಕರು:

ದಿ ಪ್ಯಾರಾಮೌಂಟ್ ಪ್ರಿಂಟರ್ಸ್ & ಸರ್ವೀಸಸ್
ಬಾವಿಕಟ್ಟೆ ಆಸ್ಪತ್ರೆ ಪಕ್ಕ, ಶಿವೆ ಟಾಕೀಸ್ ಹತ್ತಿರ,
ಬಂಬೂ ಬಜಾರ್ ರಸ್ತೆ, ಗಂಗಾವತಿ
ಮೊ. : 98450 14492



**ಶ್ರೀ ಮ.ನಿ.ಪ್ರ. ಜಗದ್ಗುರು ಲಿಂ. ಮರಿಶಾಂತವೀರ ಮಹಾಸ್ವಾಮಿಗಳು**

ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ

ಸಂಸ್ಥಾಪಕರು, ಶ್ರೀ ಗವಿಸಿದ್ಧೇಶ್ವರ ಮಹಾವಿದ್ಯಾಲಯ, ಕೊಪ್ಪಳ



**ಶ್ರೀ ಮ.ನಿ.ಪ್ರ. ಜಗದ್ಗುರು ಅಂ. ಶಿವಶಾಂತವೀರ ಮಹಾಸ್ವಾಮಿಗಳು**

**ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ**



**ಶ್ರೀ ಮ.ನಿ.ಪ್ರ. ಜಗದ್ಗುರು ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು**

ಸಂಸ್ಥಾನ ಶ್ರೀ ಗವಿಮತ, ಕೊಪ್ಪಳ

ಸೋಲ ಟ್ರಸ್ಟಿಗಳು, ಶ್ರೀ ಗ.ವಿ.ವ.ಟ್ರಸ್ಟ್, ಕೊಪ್ಪಳ

## ವ್ಯವಸ್ಥಾಪಕ ಮಂಡಳಿ



**ಶ್ರೀ ಟಿ.ಜಿ. ಹಿರೇಮಠ**
ಅಧ್ಯಕ್ಷರು



**ಶ್ರೀ ಎಸ್. ಮಲ್ಲಿಕಾರ್ಜುನ**
ಕಾರ್ಯದರ್ಶಿಗಳು




**ಶ್ರೀ ಎಸ್.ಆರ್.ನವಲಿಹಿರೇಮಠ**
ಸದಸ್ಯರು



**ಶ್ರೀ ಗವಿಸಿದ್ಧಪ್ಪ ಆರೇರ**
ಸದಸ್ಯರು



**ಶ್ರೀ ಸಂಜಯ ಕೊತಬಾಳ**
ಸದಸ್ಯರು



**ಡಾ. ಆರ್. ಮರೇಗೌಡ**
ಆಡಳಿತ ಅಧಿಕಾರಿಗಳು




**ಪ್ರೊ. ಮನೋಹರ ಎಸ್. ದಾದ್ಮಿ**

ಪ್ರಾಚಾರ್ಯರು



**ಸಂಪಾದಕ ಮಂಡಳಿ**

# ಬೋಧಕ ಸಿಬ್ಬಂದಿ



**ಪ್ರೊ. ಮನೋಹರ ಎಸ್. ದಾಡ್ಮಿ**
ರಸಾಯನ ಶಾಸ್ತ್ರ ವಿಭಾಗ



**ಡಾ. ಜೆ.ಎಸ್. ಪಾಟೀಲ್**
ರಾಜ್ಯಶಾಸ್ತ್ರ ವಿಭಾಗ



**ಡಾ. ಬಸವರಾಜ ಪೂಜಾರ್**
ಕನ್ನಡ ವಿಭಾಗ



**ಡಾ. ದಯಾನಂದ ಸಾಳುಂಕೆ**
ಹಿಂದಿ ವಿಭಾಗ



**ಪ್ರಾ. ಶರಣಬಸಪ್ಪ ಬಿಳಿಎಲಿ**
ಅರ್ಥಶಾಸ್ತ್ರ ವಿಭಾಗ



**ಪ್ರಾ. ರಾಜು ಹೊಸಮನಿ**
ಇತಿಹಾಸ ವಿಭಾಗ



**ಪ್ರಾ. ಅರುಣ ಎ.ಜಿ.**
ಇಂಗ್ಲೀಷ್ ವಿಭಾಗ



**ಡಾ. ಚನ್ನಬಸವ ಸಾಹುಕಾರ**
ಸಸ್ಯಶಾಸ್ತ್ರ ವಿಭಾಗ



**ಡಾ. ಶಶಿಕಾಂತ**
ರಸಾಯನಶಾಸ್ತ್ರ ವಿಭಾಗ



**ಡಾ. ಕರಿಬಸವೇಶ್ವರ**
ವಾಣಿಜ್ಯ ವಿಭಾಗ



**ಪ್ರಾ. ಶರಣಪ್ಪ ಜಾಲಿಹಾಳ**
ವಾಣಿಜ್ಯ ವಿಭಾಗ



**ಪ್ರಾ. ಶ್ರೀದೇವಿ**
ವಾಣಿಜ್ಯ ವಿಭಾಗ



**ಪ್ರಾ. ನಾಗರಾಜ ದಂಡೋತಿ**
ಕನ್ನಡ ವಿಭಾಗ



**ಪ್ರಾ. ಮಂಜುನಾಥ ಗಾಳಿ**
ಗಣಿತ ವಿಭಾಗ



**ಪ್ರಾ. ಪ್ರಶಾಂತ**
ಪ್ರಾಣಿಶಾಸ್ತ್ರ ವಿಭಾಗ



**ಪ್ರಾ. ವೆಂಕಟೇಶ ನಾಯ್ಕ**
ಸಮಾಜಶಾಸ್ತ್ರ ವಿಭಾಗ



**ಪ್ರಾ. ಮಹೇಶ ಬಿರಾದಾರ**
ಗ್ರಂಥ ಪಾಲಕರು



**ಪ್ರಾ. ವಿನೋದ ಸಿ.ಎಂ.**
ದೈಹಿಕ ನಿರ್ದೇಶಕರು

# ಬೋಧಕೇತರ ಸಿಬ್ಬಂದಿ



ಅರುಣ ಪಾಟೀಲ್



ಶಶಿಧರ ವಿ. ಕೊತಬಾಳ



ಮಾನಪ್ಪ ಕಮ್ಮಾರ



ಅಶೋಕ ಗೋಗಿ



ಅಜ್ಜಪ್ಪ



ಪಾರ್ವತಮ್ಮ ಹುಲ್ಲೂರು



ಪ್ರಭಾಕರ ವಾಲ್ಮೀಕಿ



ನಾಗರಾಜ ಹೊಸಳ್ಳಿ



ಕುಮಾರಸ್ವಾಮಿ

## ಸಂಪಾದಕೀಯ......

ಪ್ರತಿಭೆ ಎಲ್ಲರಲ್ಲೂ ಇರುತ್ತದೆ ಅದನ್ನು ಪ್ರದರ್ಶಿಸಿದಾಗ ಜಗತ್ತು ಗುರುತಿಸಿ ಗೌರವಿಸುತ್ತದೆ. ಅಂತಹ ಪ್ರತಿಭೆಗಳನ್ನು ಗುರುತಿಸುವದು ನಮ್ಮಜವಾಬ್ದಾರಿಯಾಗಿದೆ."ಮೌಲ್ಯಾಧಾರಿತ ಶಿಕ್ಷಣ, ಮತ್ತು ಪರಿಪೂರ್ಣಜ್ಞಾನ ಹೊರಹೊಮ್ಮಿಸಿ ಆದ್ಯತಾ ಸಂಸ್ಥೆಯನ್ನಾಗಿ ಮಾರ್ಪಡಿಸುವದೇ ನಮ್ಮ ಸಂಸ್ಥೆಯ ಪರಮಧ್ಯೇಯ." "ಪ್ರಚಲಿತ ಶಿಕ್ಷಣವನ್ನು ಒದಗಿಸಲು ಪರಿಣಿತ ಬೋಧಕರೊಂದಿಗೆ, ಮೂಲಸೌಕರ್ಯ ಸಂಯೋಜಿಸಿ, ಸಮಾಜಕ್ಕೆಗರಿಷ್ಠ ಉಪಯುಕ್ತವಾಗಬಲ್ಲ ವಿದ್ಯಾರ್ಥಿಗಳನ್ನು ಸನ್ನದ್ದುಗೊಳಿಸುವದೇ ನಮ್ಮ ಸಂಸ್ಥೆಯ ಪರಮಉದ್ದೇಶ" ನಮ್ಮ ಸಂಸ್ಥೆಯಧ್ಯೇಯ ಉದ್ದೇಶಗಳನ್ನು ಹೊತ್ತು ಅವುಗಳನ್ನು ಬಹುತೇಕ ಈಡೆರಿಸಿದೆ ಮತ್ತುಈಡೇರಿಸುವ ಮಾರ್ಗದಲ್ಲಿ ಸಾಗುತ್ತಿರುವದು ನಮ್ಮ ಹೆಮ್ಮೆ.

2018-19ನೇ ಸಾಲಿನ ವಾರ್ಷಿಕ ಸಂಚಿಕೆ "ಗವಿಸಿರಿ" ಹೊರಬರುತ್ತಿರುವದು ಸಂತೋಷ ಹಾಗು ಹೆಮ್ಮೆಯ ವಿಷಯವಾಗಿದೆ.ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿ ಸಮೂಹ ತಮ್ಮ ಪ್ರತಿಭೆ, ಕಲಾ ಕೌಶಲ್ಯಗಳನ್ನು ಚಿತ್ರರೂಪದಲ್ಲಿ ಪ್ರಕಟಿಸಲುಇದೊಂದು ಸಂತಸದ ಸುವರ್ಣವಕಾಶವಾಗಿದೆ.ಶೈಕ್ಷಣಿಕ ಸಾಲಿನ ವರ್ಷದಕೊನೆಯಲ್ಲಿ ವಿದ್ಯಾರ್ಥಿಗಳಿಂದ ಲೇಖನ, ಕಥೆ, ಕವನ ಹಾಗು ಚುಟುಕು ಮುಂತಾದ ಸೃಜನಶೀಲ ಬರಹಗಳನ್ನು ಆವ್ಹಾನಿಸಲಾಗಿತ್ತು.ನಿರಿಕ್ಷೇಗೂ ಮೀರಿ ಲೇಖನಗಳು ಬಂದದ್ದು ವಿದ್ಯಾರ್ಥಿಗಳ ಆಸಕ್ತಿ ಎತ್ತಿತೋರಿಸುವಂತಿತ್ತು.ಈ ವಾರ್ಷಿಕ ಸಂಚಿಕೆಗೆ ಮಹಾವಿದ್ಯಾಲಯದ ಬಹುತೇಕಎಲ್ಲ ವಿಭಾಗಗಳಿಂದ ಬರಹ ಬಂದಿದ್ದು ಸಂಚಿಕೆರಚನೆಗೆ ಮತ್ತಷ್ಟು ಮೆರಗುಉತ್ಸಾಹತುಂಬಿತು.ಬಂದ ಲೇಖನಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಅಂತಿಮಗೊಳಿಸುವದು ಒಂದುದೊಡ್ಡಜವಬ್ದಾರಿ ಸವಾಲೇ ಹೌದು.ಈ ಮಹತ್ವದಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ ಎಂಬ ತೃಪ್ತಿಯು ನನಗಿದೆ.

ಸೂಕ್ಷ್ಮದರ್ಶಿಗಳೆ! ಈ ವಾರ್ಷಿಕ ಪತ್ರಿಕೆ ಮೀಸವು ದೋಷವಿಲ್ಲದ ಸರ್ವಾಂಗ ಮೌಲ್ಯ ಪತ್ರಿಕೆಯಂದು ಹೇಳುತ್ತಿಲ್ಲ. ತಾವು ಸಹ ಬಲ್ಲಿರಿ..ಆದಿಕವಿ ವಾಲ್ಮಿಕಿಯಕಾವ್ಯದಲ್ಲೂಅಭಾವ ಹುಡುಕಿದ್ದಾರೆ.ಮಹಾಕವಿ ಕಾಳಿದಾಸನ ಕೃತಿಗಳಲ್ಲಿ ಕೊರತೆಕಂಡಿದ್ದಾರೆ.ಭವಭೂತಿ, ಬಾಣರಂತಹ ಪ್ರಭಾವಿಶಾಲಿ ರಚನೆಯಲ್ಲೂ ಸಹ ತಪ್ಪನ್ನುಎತ್ತಿ ತೋರಿಸಿದ್ದಾರೆ. ವಿಶ್ವವಿಖ್ಯಾತ ಷೆಕ್ಸಪೀಯರನ ಬರಹದಲ್ಲೂ ಸಹ ಊನ ನೋಡಿದ್ದಾರೆ.ಇದನ್ನು ತಿಳಿದು ಸಹ ವಿದ್ಯಾರ್ಥಿಗಳಿಂದ ಪ್ರಾಧ್ಯಾಪಕರಿಂದ ಲೇಖನಗಳನ್ನು ಪಡೆದಿರುವ ಈ ಪತ್ರಿಕೆಯಲ್ಲಿನ ವಿಷಯಗಳು ಪರಿಪೂರ್ಣತೆ ಪಡೆದಿವೆ ಎನ್ನುವದು ಸತ್ಯಕ್ಕೆದೂರವೆಂಬ ಅರಿವಿನ ಜೊತೆಗೆಈ ಮಾಸ ಪತ್ರಿಕೆಯಲ್ಲಿನ ಅನೇಕ ವಿಚಾರಗಳು ಅರ್ಥಪೂರ್ಣವಾಗಿವೆ ಮತ್ತುಜ್ಞಾನದ ಬೆಳಕನ್ನು ಚಲ್ಲುತ್ತವೆಎಂಬುದನ್ನು ಅಲ್ಲಗಳೆಯುವಂತಿಲ್ಲ. ಇವು ಪರಿಪೂರ್ಣತೆಯ ಹಾದಿಯಲ್ಲಿಕ್ರಮಿಸುವ ಸುಂದರ ಚಿಂತನೆಗಳೊಂದಿಗೆ ಹೊರಬಂದ ವಿಶೇಷ ಜ್ಞಾನದೀವಿಗೆ ಹಾಗೂ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಕೃಷಿಗೆ ಸ್ಪೂರ್ತಿತುಂಬುತ್ತದೆಎಂಬುವದನ್ನು ನಿಸ್ಸಂಕೋಚವಾಗಿ ಹೇಳಬಲ್ಲೆ.

ಆತ್ಮೀಯರೆ! ಇಂತಹ ಸದಾವಕಾಶದ ಸಂದರ್ಭದಲ್ಲಿ ನಮ್ಮ ಸಂಸ್ಥೆ ಬೆಳೆದು ಬಂದ ಪರಂಪರೆಯನ್ನು ಹೇಳದೆ ಹೋದರೆ ಸಂಪಾದನ ನುಡಿ ಪೂರ್ಣವಾಗಲಾರದು ಎಂಬ ಅರಿವಿನೊಂದಿಗೆ ಒಂದಿಷ್ಟು ವಿಚಾರ ನಮ್ಮ ಸಂಸ್ಥೆಯಕುರಿತು ಹಂಚಿಕೊಂಡಿದ್ದೇನೆ. ಇಂದು ಭವ್ಯವಾಗಿ ಬೆಳೆದುನಿಂತ ಶ್ರೀ ಗವಿಸಿದ್ಧೇಶ್ವರ ಶಿಕ್ಷಣ ಸಂಸ್ಥೆಗಳ ಹಿಂದೆ ಶ್ರೀಮಠದ ಪರಮ ಪೂಜ್ಯರ ನಿಷ್ಕಲ್ಮಶ ಸೇವೆಯಕೃಪಕಟಾಕ್ಷವಿದೆ.

"ಸ್ತಿಮಿತೋನ್ನತಸಂಚರಾ ಜನಸಚಿತಾಪಹರಿಣಾಃ
ಜಾಯತೇ ವಿಲಾ ಲೋಕೇ ಜಲದಾ ಇವ ಸಜ್ಜನಾಃ"

ಸ್ಥಿರವಾದ ಬಹಳ ಎತ್ತರದಲ್ಲಿ ಸಂಚರಿಸುವುವೂ, ಜನರ ಸಂತಾಪವನ್ನು ಕಳೆಯುವುವೂ ಆದ ಮೋಡಗಳಂತೆ

ಲೋಕದಲ್ಲಿಉನ್ನತವಾದ ನಡತೆಯುಳ್ಳವರೂ, ಜನರ ಕಷ್ಟಗಳನ್ನು ಪರಿಹರಿಸುವುವರೂಆದ ಸಜ್ಜನರು ಬಹಳ ವಿರಳ ಎನ್ನುವಂತೆ.ಈ ಭಾಗದಜನರಕಷ್ಟವನ್ನುಅರಿತು. ಹಿಂದುಳಿದ ಈ ನಾಡಿನ, ಇಲ್ಲಿನಜನರ ಬಾಳು ಬೆಳಗಬೇಕಾದರೆ ಈ ಭಾಗಕ್ಕೆ ಶಿಕ್ಷಣವೊಂದೆ ಆಧಾರವೆಂದುಅರಿತವರುಆಯುರ್ವೆದ ಪಂಡಿತರು, ಶಿಕ್ಷಣ ತಜ್ಞರು, ಶ್ರೀಮಠದ 16ನೇ ಪೀಠಾಧಿಪತಿಗಳು, ಪರಮ ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಲಿಂ. ಮರಿಶಾಂತವೀರ ಮಹಾಸ್ವಾಮಿಗಳವರು.ಇವರು 1951ರಲ್ಲಿ ಶ್ರೀ ಗವಿಸಿದ್ಧೇಶ್ವರ ಪ್ರೌಢಶಾಲೆಯನ್ನು ಸ್ಥಾಪಿಸಿದರು.1963ರಲ್ಲಿ ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕಟ್ರಸ್ಟ ಆರಂಭಿಸಿ ಶ್ರೀ ಗವಿಮಠದ ಸಮಸ್ತ ಆಸ್ತಿಯನ್ನು ಈ ಸಂಸ್ಥೆಗೆ ಧಾರೆಯರೆದರು.ತಮ್ಮಕೊನೆಯಕ್ಷಣದವರೆಗು ಸಮಸ್ತ ಭಕ್ತಕುಲಕೋಟಿಯಉದ್ಧಾರಕ್ಕಾಗಿತಮ್ಮನ್ನು ತೊಡಗಿಸಿಕೊಂಡ ದಿವ್ಯ ಪುಣ್ಯ ಜೀವಿಗಳವರು. ಶ್ರೀ ಗವಿಮಠದ ಭವ್ಯ ಪರಂಪರೆಯ 17ನೇ ಪೀಠಾಧಿಪತಿಗಳಾದ ಶಿವತೇಜರು, ಪ್ರಶಾಂತಚಿತ್ತರು, ಸಮಸ್ತ ಭಕ್ತರಆನಂದದಲ್ಲಿತಮ್ಮಆನಂದ ಅನುಭವಿಸಿದ ಪರಮ ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಲಿಂ. ಶಿವಶಾಂತವೀರ ಮಹಾಶಿವಯೋಗಿಗಳವರು. ಪರಮ ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಲಿಂ. ಮರಿಶಾಂತವೀರ ಮಹಾಸ್ವಾಮಿಗಳವರು ಪ್ರಾರಂಭಿಸಿದ ಶಿಕ್ಷಣ ಸಂಸ್ಥೆ ಇಂದು ಪ್ರಾಥಮಿಕ ಶಾಲೆ, ಪಬ್ಲಿಕ್ ಶಾಲೆ, ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯ, ಆಯುರ್ವೆದ ಮಹಾವಿದ್ಯಾಲಯ, ಶಿಕ್ಷಕರ ತರಬೇತಿ ಸಂಸ್ಥೆ ಹಾಗೂ ಸ್ನಾತಕೋತ್ತರ ಕೇಂದ್ರಗಳು ಸಂಸ್ಥೆಯಅಡಿಯಲ್ಲಿ ಸೇವೆಗೈಯುತ್ತಿವೆ. ಈ ಇರ್ವತಪೋನಿಷ್ಟರ ಪುಣ್ಯ ಕೃಪಾಶೀರ್ವಾದದ ಫಲದಿಂದ ಈ ಭಾಗದಲ್ಲಿ ಶೈಕ್ಷಣಿಕಕ್ರಾಂತಿಯಾಗಿ 22 ಶೈಕ್ಷಣಿಕ ಸಂಸ್ಥೆಗಳು, ವಸತಿನಿಲಯಗಳು ಜ್ಞಾನತುಂಬುವಕಾರ್ಯದಲ್ಲಿ ನಿರತವಾಗಿವೆ. ಇಂದಿನ ಪ್ರಸ್ತುತ 18ನೇ ಪೀಠಾಧಿಪತಿಗಳಾದ ಪರಮ ಪೂಜ್ಯಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಜಿಯವರು ಪೂರ್ವ ಪೂಜ್ಯರು ಹಾಕಿದ ಪಥದಲ್ಲಿ ಸಾಗುತ್ತ ಸಂಸ್ಥೆಗಳನ್ನು ಬೆಳಸಿದ್ದಾರೆ.ಭಾರತದದಕ್ಷಿಣ ಭಾಗದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕ ಸಂಸ್ಥೆ ಎನ್ನುವಕೀರ್ತಿಗೆ ಪಾತ್ರವಾಗುವಂತೆ ಪೋಷಿಸಿ ಬೆಳೆಸುತ್ತಿದ್ದಾರೆ.ಅನೇಕ ದೂರದೃಷ್ಟಿಯುಳ್ಳ ಪರಮ ಪೂಜ್ಯಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಜಿಯವರು ಶೈಕ್ಷಣಿಕವಾದ ಅನೇಕ ಸಂಕಲ್ಪ ಹೊಂದಿದವರಾಗಿದ್ದು ಸಂಸ್ಥೆಯ ಸೇವೆಯಲ್ಲಿತೊಡಗಿದ ಸರ್ವರಿಗೂ ಮಾರ್ಗದರ್ಶಕರಾಗಿ, ಪೋಷಕರಾಗಿ ನಿಂತಿರುವದು ನಮ್ಮೆಲ್ಲರ ಪುಣ್ಯವಾಗಿದೆ.ಇಂತಹ ಭವ್ಯ ಪರಂಪರೆ ಹೊಂದಿರುವ ಶ್ರೀ ಗವಿಮಠಮಹಾ ಸಂಸ್ಥಾನದ ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕಟ್ರಸ್ಟಅಡಿಯಲ್ಲಿ ಸುಮಾರು 22ಕ್ಕೂ ಹೆಚ್ಚಿನ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆಎಂದು ಹೇಳಲು ಬಹಳ ಹೆಮ್ಮೆ ಹಾಗೂ ಸಂತೋಷವೆನಿಸುತ್ತದೆ.ಇಂತಹಅದ್ವೀತಿಯಇತಿಹಾಸ ಹಾಗು ಪರಂಪರೆಇರುವ ಪವಿತ್ರ ಸಂಸ್ಥೆಯಲ್ಲಿ ಅವಕಾಶ ದೊರೆತು ಸೇವೆ ಸಲ್ಲಿಸುತ್ತಿರುವದು ನಮ್ಮೆಲ್ಲರ ಸೌಭಾಗ್ಯವೆ ಸರಿ.

ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕಟ್ರಸ್ಟಅಡಿಯಲ್ಲಿ ನಡೆಯುತ್ತರುವ ಶ್ರೀ ಗವಿಸಿದ್ದೇಶ್ವರ ಕಲಾ, ವಿಜ್ಞಾನ ಹಾಗು ವಾಣಿಜ್ಯ ಪದವಿ ಮಹಾವಿದ್ಯಾಲಯ ಈಗಾಗಲೇ ಸುವರ್ಣ ಸಂಭ್ರಮ ಆಚರಿಸಿಕೊಂಡಿರುವದು ಹೆಮ್ಮೆಯ ಸಂಗತಿ. ಸುಮಾರುಆರು ದಶಕಗಳಕಾಲ ಇತಿಹಾಸವಿರುವ ನಮ್ಮ ಮಾಹಾವಿದ್ಯಾಲಯ ಪರಮ ಪೂಜ್ಯಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಜಿಗಳವರ ಮಾಗದರ್ಶನದಲ್ಲಿ ಸರ್ವಾಂಗೀಣಅಭಿವೃದ್ಧಿಯತ್ತ ಸಾಗಿದ್ದು ಈ ಭಾಗದ ಪ್ರತಿಷ್ಠಿತ ಪದವಿ ಮಹಾವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಮ್ಮ ಮಹವಿದ್ಯಾಲಯದಲ್ಲಿ ಬಿ.ಎ., ಬಿ.ಕಾಂ., ಬಿ.ಎಸ್.ಸಿ., ಹಾಗೂ 2013–14ರಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭವಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಭವಿಷ್ಯ ನೀಡಿದ ಮಹಾವಿದ್ಯಾಲಯವಾಗಿದೆ.

ನಮ್ಮ ಸಂಸ್ಥೆ ಶೈಕ್ಷಣಿಕ ಚಟುವಟಿಕೆಗಳಿಗೆ ಅಷ್ಟೇ ಸೀಮಿತವಾಗಿರದೆ ಅನ್ನ, ಜ್ಞಾನ, ಆರೋಗ್ಯ, ಆಶ್ರಯಚತುರ್ವಿಧದಾಸೋಹದ ಸಂಸ್ಕೃತಿ, ಸಂಸ್ಕಾರ ಮಕ್ಕಳಲ್ಲಿ ಪೋಷಿಸಿ ಬೆಳೆಸುತ್ತಿದೆ.

ಗೌರವಾರ್ಹರೆ! ನಮ್ಮಲ್ಲಿಉತ್ತಮ ಸಂಸ್ಕಾರಕ್ಕೆ 'ಜೀವನದರ್ಶನ' ಸಾಂಸ್ಕೃತಿಕ ಮನೋರಂಜನೆಗೆ ವಿದ್ಯಾರ್ಥಿಒಕ್ಕೂಟ, ಯುವಜನೋತ್ಸವಇತರ ಅನೇಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗುತ್ತದೆ. ಮಹಾವಿದ್ಯಾಲಯದಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನೀಯರುಉತ್ಸಾಹದಿಂದ ಪಾಲ್ಗೊಂಡು ಯಶಸ್ವೀಯಾಗಿದ್ದಾರೆ.2018–19ನೇ ಸಾಲಿನ ಕಾಲೇಜಿನ ಬಿಳ್ಕೋಡುಗೆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಆಡಳಿತ ವಿಭಾಗದ

ಕುಲಸಚಿವರಾದ ಪ್ರೋ. ತುಳಸಿಮಾಲಾಅವರು ಆಗಮಿಸಿ ನಮ್ಮ ವಿದ್ಯಾರ್ಥಿಗಳಿಗೆ ಸ್ಪೂರ್ತಿಯನ್ನುತುಂಬಿದ್ದು ವಿಶೇಷತೆಯಾಗಿತ್ತು.

2019 ಮಾರ್ಚನಲ್ಲಿ ನಮ್ಮ ಮಹಾವಿದ್ಯಾಲಯದ  ವಿದ್ಯಾರ್ಥಿನಿ ಕುಮಾರಿರುಕ್ಮಿಣಿ ಬಂಗಾಳಿಗಿಡದ ಪೆಂಕಾಕ್ ಸಿಲತ್ ಪಂದ್ಯದಲ್ಲಿರಾಷ್ಟ್ರಮಟ್ಟದ ಬೆಳ್ಳಿ ಮತ್ತು ಕಂಚು ಪದಕ ಪಡೆದಿದ್ದಾಳೆ. ಹಾಗೆಯೇಎನ್.ಸಿ.ಸಿ ವಿದ್ಯಾರ್ಥಿ ವಿರೇಶಎಣ್ಣಿರಾಷ್ಟ್ರದಗಣರಾಜ್ಯೋತ್ಸವದ ಪರೆಡನಲ್ಲಿ ಹಾಗೂ ಎನ್.ಎಸ್.ಎಸ್. ವಿದ್ಯಾರ್ಥಿಗಣೇಶ ಬಣ್ಣದರಾಜ್ಯಗಣರಾಜ್ಯೋತ್ಸವದ ಪರೆಡನಟೀಮ್‌ಕ್ಯಾಪ್ಟನಾಗಿ ಭಾಗವಹಿಸಿ ಸಾಧನೆ ಮಾಡಿರುವದು ನಮ್ಮ ಮಹಾವಿದ್ಯಾಲಯದ ಹೆಮ್ಮೆಯಾಗಿದೆ ಸಾಧನೆತೋರಿ ಮಹಾವಿದ್ಯಾಲಯಕ್ಕೆಕೀರ್ತಿತಂದ ವಿದ್ಯಾರ್ಥಿಗಳಿಗೆ ಅಭಿನಂಧನೆಗಳನ್ನು ಸಲ್ಲಿಸುತ್ತೇನೆ.

ಮಹಾವಿದ್ಯಾಲಯದವತಿಯಿಂದ ಸುಂದರ ಹಾಗೂ ಉತ್ತಮ  ವಿಚಾರಗಳನ್ನು ಒಳಗೊಂಡ ವಾರ್ಷಿಕ ಸಂಚಿಕೆ ಹೊರತರುವದಕ್ಕೆ ಲೇಖನ, ಕವಿತೆ, ಚುಟುಕು, ಇನ್ನಿತರ ಸಾಹಿತ್ಯ ಮತ್ತು ಮಾಹಿತಿಆಧಾರಿತ ಬರಹ ನೀಡಿದ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರಿಗೆ ಧನ್ಯವಾದಗಳು.

ಇನ್ನು ಈ ಬರಹವನ್ನು ಒದಿ ಯಾವಗಲೂ ಪ್ರೋತ್ಸಾಹಿಸುವ ಒದುವ ಸಹೃದಯ ಬಳಗಕ್ಕು ಹಾಗೆ ಹಿರಿಯರಿಗೂ ಈ ಸಂಧರ್ಭದಲ್ಲಿ ಸ್ಮರಿಸುತ್ತೇನೆ. ವಾರ್ಷಿಕ ಸಂಚಿಕೆ ಹೊರತರಲು ಸೂಕ್ತ ಮಾರ್ಗದರ್ಶನ, ಸಲಹೆ, ಸಹಕಾರ ನೀಡಿದ ಸಂಸ್ಥೆಯ ಆಡಳಿತ ಮಂಡಳಿಯವರಿಗೂ ಕೃತಜ್ಞನಾಗಿದ್ದೇನೆ.

ಲೇಖನ ಸಂಗ್ರಹಿಸಲು, ದೋಷ ಸರಿಪಡಿಸಲು ಪ್ರೋತ್ಸಾಹಿಸಿದ ಸಂಪಾದನಾ ಮಂಡಳಿಯ ಪ್ರಧಾನ ಸಂಪಾದಕರಿಗೆ, ಸದಸ್ಯರಿಗೆ, ಮಹಾವಿದ್ಯಾಲಯದ ಪ್ರಾಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ, ಸಹಕರಿಸಿದ ಎಲ್ಲರಿಗೆ ವಂದನೆಗಳನ್ನು ಸಲ್ಲಿಸುತ್ತೆನೆ.

ಅಚ್ಚುಕಟ್ಟಾದ ಡಿ.ಟಿ.ಪಿ ಮಾಡಿ ಸುಂದರಅಕ್ಷರ ಜೋಡಿಸಿದ ಸೊಗಸಾದ ಮುದ್ರಣಕ್ಕೆ ಹೆಸರಾದ ಪ್ಯಾರಾ ಮೌಂಟ್‌ಮುದ್ರಣಾಲಯದ ವ್ಯೆವಸ್ಥಾಪಕರಿಗೆ, ಸಿಬ್ಬಂಧಿಯವರಿಗೆ ವಂದನೆಗಳನ್ನು ಸಲ್ಲಿಸುವೆ.

ಸಹೃದಯರೇಕೊನೆಯದಾಗಿ ಮತ್ತು ವಿಶೇಷವಾಗಿ ಈ ವಾರ್ಷಿಕ ಸಂಚಿಕೆಒದಲುಕೈಗೆತ್ತಿಕೊಂಡಿರುವ ನಿಮಗಿದೋ..ನನ್ನಅನಂತ ವಂದನೆಗಳು.

ಸಂಪಾದಕ ಮಂಡಳಿ ಪರವಾಗಿ

**ಪ್ರೋ. ಮನೋಹರ ಎಸ್. ದಾದ್ಮಿ**

ಪ್ರಾಚಾರ್ಯರು

*****

ರಾಷ್ಟ್ರೀಯ ಸೇವಾ ಯೋಜನೆ

ಸ್ವಾಮಿ ವಿವೇಕಾನಂದ ಹಾಗೂ ಮಹಾತ್ಮಗಾಂಧೀಜಿಯವರ ಸ್ಫೂರ್ತಿ ಪ್ರೇರಣೆ ಹಾಗೂ ತತ್ವಾದರ್ಶಗಳನ್ನು ಯುವಜನತೆಯಲ್ಲಿ ಬಿತ್ತರಿಸಲುಇರುವಯೋಜನೆಯೆಂದರೆರಾಷ್ಟ್ರೀಯ ಸೇವಾ ಯೋಜನೆಯಾಗಿದೆ.ಸಮುದಾಯದ ಸೇವೆಯ ಮೂಲಕ ವ್ಯಕ್ತಿತ್ವ ವಿಕಾಸನಕ್ಕೆ ಅವಕಾಶವಿರುವರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳು ರಾಷ್ಟ್ರಾದ್ಯಂತ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಮಹಾವಿದ್ಯಾಲಯಗಳಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ.

ನಮ್ಮ ಮಹಾವಿದ್ಯಾಲಯದಲ್ಲಿರಾಷ್ಟ್ರೀಯ ಸೇವಾ ಯೋಜನೆಯಎರಡು ಘಟಕಗಳು ಕಾರ್ಯನಿರ್ವಹಿಸಿತ್ತಿದ್ದು ಪ್ರತಿಯೊಂದಘಟಕಕ್ಕೆತಲಾ 100 ವಿದ್ಯಾರ್ಥಿಗಳಿಗೆ ಅವಕಾಶವಿದೆ.ರಾಷ್ಟ್ರೀಯ ಸೇವಾ ಯೋಜನೆಯ ಎ ಮತ್ತು ಬಿ ಘಟಕಗಳೆರಡನ್ನು ಹೊಂದಿರುವ ಮಹಾವಿದ್ಯಾಲಯದಲ್ಲಿ ನಿರಂತರವಾಗಿ ವಿವಿಧ ಪ್ರಾದ್ಯಾಪಕರು ಸೇವೆಸಲ್ಲಿಸುತ್ತಾ ಬಂದು ಪ್ರಸ್ತುತ ವರ್ಷ ಎ ಘಟಕಕ್ಕೆ ಪ್ರೋ.ಶರಣಬಸಪ್ಪ ಹಾಗೂ ಬಿ ಘಟಕಕ್ಕೆ ಡಾ.ಬಸವರಾಜ ಪೂಜಾರರವರು ಕಾರ್ಯಕ್ರಮಾಧಿಕಾರಿಗಳಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಗೈಯುತ್ತಿದ್ದಾರೆ.

ಪ್ರಸ್ರುತ ವರ್ಷದ ಪ್ರಾರಂಭದಲ್ಲಿ ಸೂಕ್ತ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ವಿದ್ಯಾರ್ಥಿ ತಂಡಗಳ ರಚನೆಯ ನಂತರರಾಷ್ಟ್ರೀಯ ಸೇವಾ ಯೋಜನೆಯ ಸಲಹಾ ಮಂಡಳಿಯ ಮಾರ್ಗದರ್ಶನದಂತೆ ಪ್ರಸ್ತುತ ವರ್ಷದ ಕಾರ್ಯಯೋಜನೆಗಳನ್ನು ಸಿದ್ದಪಡಿಸಲಾಯಿತು.

- ಜೀವನದರ್ಶನ – ಟಿ. ವಿಶ್ವನಾಥ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುವ ಡಿ ದರ್ಜೆಯ ಸಿಬ್ಬಂದಿಗಳಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.
- ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಧ್ವಜಾರೋಹಣ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಎನ್.ಎಸ್.ಎಸ್ ಸ್ವಯಂಸೇವಕರು ಪರೇಡ ನೆರವೇರಿಸಿದರು.
- ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ 125ನೇ ವರ್ಷದ ಸವಿನೆನಪಿನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.
- ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ ಆಚರಿಸಲಾಯಿತು.
- ಜೀವನ ದರ್ಶನ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್ ಸ್ವಯಂ ಸೇವಕರು ಸಸಿ ವಿತರಣೆ ಮಾಡಿದರು.
- ಎನ್.ಎಸ್.ಎಸ್ ಘಟಕ ಹಾಗೂ ಜಿಲ್ಲಾ ಕಾನೂನು ಅರಿವು ಘಟಕದ ಸಹಯೋಗದಲ್ಲಿ ಕಾನೂನು ಅರಿವು ಕಾರ್ಯಕ್ರಮ ಏರ್ಪಡಿಸಲಾಗಿತ್ತು.
- ವಲ್ಲಭ ಬಾಯಿ ಪಟೇಲರ ಜನ್ಮದಿನಾಚರಣೆಯನ್ನು ರಾಷ್ಟ್ರೀಯ ಏಕತಾ ದಿನವನ್ನಾಗಿ ಆಚರಿಸಲಾಯಿತು.
- ಸ್ವಾಮಿ ವಿವೇಕಾನಂದರ ಜನ್ಮ ದಿನದ ನಿಮಿತ್ಯವಾಗಿ ಯುವ ಸಪ್ತಾಹ ಕಾರ್ಯಕ್ರಮವನ್ನು ಯುವಜನ ಮತ್ತು ಸೇವಾ ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

- ಯುಥ ಪಾರ್ಲಿಮೆಂಟ್ ಫೆಸ್ಟಿವಲ್ – 2019 ಸ್ಪರ್ಧೆಯ ಕೊಪ್ಪಳ ಜಿಲ್ಲೆಯ ನೋಡಲ್ ಮಹಾವಿದ್ಯಾಲಯವಾಗಿ ಕಾರ್ಯನಿರ್ವಹಿಸಿ 50 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಯಿತು. ವಿಶ್ವವಿದ್ಯಾಲಯ ಮಟ್ಟದ ಯುಥ ಪಾರ್ಲಿಮೆಂಟ್ ಫೆಸ್ಟಿವಲ್‌ನಲ್ಲಿ ಮಹಾವಿದ್ಯಾಲಯದ ಕು. ಕಾವ್ಯ ವಿಶ್ವವಿದ್ಯಾಲಯಕ್ಕೆ ದ್ವಿತೀಯ ಬಹುಮಾನ ಪಡೆದುಕೊಂಡರು.

- ಶ್ರೀ ಗವಿಸಿದ್ಧೇಶ್ವರ ಜಾತ್ರಾ ನಿಮಿತ್ಯವಾಗಿ ಕೃಪಾ ದೃಷ್ಟಿ (ನೇತ್ರದಾನ ಜಾಗೃತಿ) ವಿದ್ಯಾರ್ಥಿ ಜಾಥಾದಲ್ಲಿ ಭಾಗವಹಿಸಿದ್ದರು.

- ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ವಿದ್ಯಾರ್ಥಿಗಳು ಕೈಲಾಸ ಮಂಟಪ, ದಾಸೋಹ ಹಾಗೂ ಇತರ ವಿಭಾಗಗಳಲ್ಲಿ ಸೇವೆ ಸಲ್ಲಿಸಿದರು.

- ನೇತಾಜಿ ಸುಭಾಷಚಂದ್ರ ಭೋಸರವರ ಜನ್ಮದಿನಾಚರಣೆ ಆಚರಿಸಲಾಯಿತು.

- ಗಣರಾಜ್ಯೋತ್ಸವ ನಿಮಿತ್ತ ಮಹಾವಿದ್ಯಾಲಯದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಲಾಯಿತು. ರಾಜ್ಯಮಟ್ಟದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಯಾದ ಕು. ಗಣೇಶ ಬಣ್ಣದ ಭಾಗವಹಿಸಿ, ದ್ವಿತೀಯ ಬಹುಮಾನ ಪಡೆದುಕೊಂಡರು.

- ವಿದ್ಯಾರ್ಥಿಗಳಿಗೆ ಲೋಕಸಭಾ ಚುನಾವಣೆ ನಿಮಿತ್ಯ ಮತದಾನ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಯುತ ಪಿ.ಸುನೀಲ್ ಕುಮಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ರೀ.ಮ.ನಿ.ಪ್ರ.ಲಿಂ. ಶಿವಶಾಂತವೀರ ಶಿವಯೋಗಿಗಳ ಪುಣ್ಯಾರಾಧನೆ ನಿಮಿತ್ತ ಪಾದಯಾತ್ರೆ ಹಾಗೂ ಜಲಚಿಂತನ ಗೋಷ್ಠಿಯಲ್ಲಿ ಸ್ವಯಂ ಸೇವಕರು ಭಾಗವಹಿಸಿದ್ದರು.

| | |
|---|---|
| ಘಟಕಾಧಿಕಾರಿಗಳು | ಘಟಕಾಧಿಕಾರಿಗಳು |
| **ಡಾ. ಬಸವರಾಜ ಪೂಜಾರ** | **ಪ್ರಾ. ಶರಣಬಸಪ್ಪ ಬಿಳಿಎಲಿ** |

## ಎನ್.ಸಿ.ಸಿ. ಘಟಕದ ವಾರ್ಷಿಕ ವರದಿ

*Unity And Discipline*



ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯದಲ್ಲಿ 1971ನೇ ಸಾಲಿನಲ್ಲಿ NCC ಘಟಕವು ಆರಂಭವಾಗಿದ್ದು, ಸುಮಾರು 5 ದಶಕಗಳಿಂದ ಮಹಾವಿದ್ಯಾಲಯದ ಕ್ರೀಡೆ ಸಾಹಸ ಹಾಗೂ ದೇಶ ಸೇವೆಯ ಕಾಯಕದಲ್ಲಿ ತೊಡಗಿಕೊಂಡಿದೆ. ಬಳ್ಳಾರಿಯ 34ನೇ ಬಟಾಲಿಯನ್ ಅಡಿಯಲ್ಲಿ ನಮ್ಮ ಕಾಲೇಜಿನ ಈ NCC ಘಟಕವು 78 ವಿದ್ಯಾರ್ಥಿಗಳು ಹಾಗೂ 30 ವಿದ್ಯಾರ್ಥಿನಿಯರನ್ನು ಒಳಗೊಂಡಂತೆ ಒಟ್ಟು 108 NCC ಕ್ಯಾಡೆಟಗಳನ್ನು ಹೊಂದಿದೆ. NCC ಅಧಿಕಾರಿಗಳಾದ ಕ್ಯಾಪ್ಟನ್ ದಯಾನಂದ ಸಾಳುಂಕೆಯವರ ಮಾರ್ಗದರ್ಶನದಲ್ಲಿ 2015ರಲ್ಲಿ ಆರ್.ಕುಮಾರ ಹಾಗೂ 2019ರಲ್ಲಿ ವೀರೇಶ ಎಣ್ಣಿ NCC ಕ್ಯಾಡೆಟಗಳು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೆಡಿನಲ್ಲಿ ಭಾಗವಹಿಸಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

2018ರಲ್ಲಿ ನಡೆದ ರಾಜಸ್ಥಾನದ ಜೈಸಲ್‌ಮೆರ್‌ನಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಕ್ಯಾಂಪಿನಲ್ಲಿ ನಮ್ಮ ಮಹಾವಿದ್ಯಾಲಯದ 18 NCC ಕ್ಯಾಡೆಟಗಳು ಭಾಗವಹಿಸಿ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವುದು ನಮ್ಮ ಎನ್.ಸಿ.ಸಿ. ಘಟಕದ ಹೆಮ್ಮೆಯ ಸಂಗತಿಯಾಗಿದೆ. ಹಾಗೆಯೇ ಡಿಸೆಂಬರನಲ್ಲಿ ಗುಜರಾತ ರಾಜ್ಯದ ವಡೋದರಾದಲ್ಲಿ ನಡೆದ ರಾಷ್ಟ್ರಮಟ್ಟದ ಟ್ರೆಕ್ಕಿಂಗ್ ಕ್ಯಾಂಪಿನಲ್ಲಿ ನಮ್ಮ ಎನ್.ಸಿ.ಸಿ. ಕ್ಯಾಡೆಟುಗಳು ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಜೊತೆಗೆ ರಾಷ್ಟ್ರೀಯ ಏಕತಾ ಪ್ರತಿಮೆಯ ಪ್ರತೀಕವಾದ ಭಾರತದ ಉಕ್ಕಿನ ಮನುಷ್ಯ ಸರದಾರ ವಲ್ಲಭಾಯಿ ಪಟೇಲರ ಪುತ್ಥಳಿಗೆ ಭೇಟಿ ನೀಡಿದ್ದು ವಿಶೇಷವಾಗಿದೆ.

ಅಸ್ಸಾಂ ರಾಜ್ಯದ ತೇಜಪೂರ್‌ದಲ್ಲಿ ನಡೆದ ರಾಷ್ಟ್ರಮಟ್ಟದ ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ನಮ್ಮ ಕಾಲೇಜಿನ NCC ಘಟಕ ಪಡೆದುಕೊಂಡಿದೆ.

ನೇತ್ರದಾನ, ರಕ್ತದಾನ ಮಾಡುವಲ್ಲಿ ಮಹಾವಿದ್ಯಾಲಯದ ಕ್ಯಾಡೆಟಗಳು ಸಮಾಜ ಸೇವೆಯನ್ನು ಗೈದು ಸಮಾಜದ ಹಿತಚಿಂತಕರಾಗಿದ್ದಾರೆ. ಕ್ಷಯರೋಗ, ಏಡ್ಸರೋಗ ಬಾಲ್ಯವಿವಾಹ ಪದ್ಧತಿ ವಿರೋಧ, ಜಲದೀಕ್ಷೆಯಂತಹ ಸಮಾಜಿಕ ಕಳಕಳಿಯ ಜಾಥಾಗಳನ್ನು ಮಾಡಿ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

2018–19ರಲ್ಲಿ 30 ಕ್ಯಾಡೆಟ್‌ಗಳು B ಸರ್ಟಿಫಿಕೇಟ ಪರೀಕ್ಷೆಗಳಲ್ಲಿ ಹಾಗೂ 21 ಕ್ಯಾಡೆಟಗಳು C ಸರ್ಟಿಫಿಕೇಟ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ಶ್ರೀ ಗವಿಸಿದ್ದೇಶ್ವರ ಜಾತ್ರಾಮಹೋತ್ಸವದಲ್ಲಿ ಶಿಸ್ತು, ಭದ್ರತೆ ಹಾಗೂ ಮಹಾದಾಸೋಹದಲ್ಲಿ ಸ್ವಚ್ಛತೆಯ ಕಾರ್ಯಗಳನ್ನು ಮಾಡಿ ಜನರಿಂದ ಅಭಿನಂದನೆ ಹಾಗೂ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ.

ಹೀಗೆ ಹತ್ತು ಹಲವಾರು ಸಾಮಾಜಿಕ, ದೇಶಪ್ರೇಮ, ಸಾಹಸಯುಕ್ತ ಕಾರ್ಯಗಳನ್ನು ನಮ್ಮ ಮಹಾವಿದ್ಯಾಲಯದ NCC ಘಟಕದ ವತಿಯಿಂದ ಪ್ರತಿ ವರ್ಷ ಹಮ್ಮಿಕೊಳ್ಳುತ್ತಿರುವುದು ಮಹಾವಿದ್ಯಾಲಯಕ್ಕೆ ಗೌರವದ ಸಂಗತಿಯಾಗಿದೆ.

**ಕ್ಯಾಪ್ಟನ್ ಡಾ. ದಯಾನಂದ ಸಾಳುಂಕೆ**
ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯ
ಕೊಪ್ಪಳ.

# ಕನ್ನಡ ವಿಭಾಗ

## ಪರಿವಿಡಿ

# ಹೆತ್ತ ಅಮ್ಮನ ಸ್ಥಾನಕ್ಕೆ ಅತ್ತಿಗೆಮ್ಮನೇ ಸಾಟಿ

**ವಿಜಯಲಕ್ಷ್ಮಿ**
ಬಿ.ಎ. 1ನೇ ಸೆಮ್

---

ಒಂಬತ್ತು ತಿಂಗಳ ಹೊತ್ತು ಹೆತ್ತವಳು ಅಮ್ಮ
ಈ ನನ್ನ ದೇಹದ ಎಲ್ಲಾ ಭಾರವ ಹೊತ್ತು ನಿಂತವಳು ಭೂತಾಯಮ್ಮ
ನನ್ನ ಜೀವನದ ಎಲ್ಲಾ ಹೊಣೆಯ ಹೊತ್ತವಳು ಅತ್ತಿಗೆಮ್ಮ
ನೀ ನನ್ನ ಅಮ್ಮನ ಸ್ಥಾನವ ತುಂಬಿದೆಯಮ್ಮ

ಎರಮನೆಯ ಹಸುಗೂಸು ನನ್ನ ಅತ್ತಿಗೆಮ್ಮ
ಈ ಮನೆಯ ಎಳೆಗೂಸಿಗೆ ಅಮ್ಮ ನೀನಾದೆಯಮ್ಮ
ಅಮ್ಮ-ಅಮ್ಮ ಎಂದು ಹಂಬಲಿಸುವಾಗ
ನನ್ನಣ್ಣನ ಜೊತೆ ನಿಂತು ಸಮಾಧಾನವ ಮಾಡಿದೆಯಮ್ಮ
ಮಕ್ಕಳು-ಮೈದುನರು ಒಂದೆ ಎಂದು ಭಾವಿಸಿದೆಯಮ್ಮ
ಹೆತ್ತ ಅಮ್ಮನ ಸ್ಥಾನಕ್ಕೆ ಅತ್ತಿಗೆಮ್ಮನೆ ನೀ ಸಾಟಿಯಮ್ಮ

ವಿದ್ಯೆಎರಡು ಅಕ್ಷರ ಕಲಿಸಿ ನೀ ಸರಸ್ವತಿಯಾದೆಯಮ್ಮ
ಮಾತು ಎಂಬ ಮಂತ್ರವ ಕಲಿಸಿದ ವಾಗ್ದೇವಿ ನೀನಮ್ಮ
ಹಸಿದಾಗ ಅನ್ನವ ನೀಡಿ ನೀ ಅನ್ನಪೂರ್ಣೇಶ್ವರಿಯಾದೆಯಮ್ಮ
ನನ್ನ ಅಮ್ಮನ ಸ್ಥಾನವ ನೀ ತುಂಬಿದೆ ಅತ್ತಿಗೆಮ್ಮ

ನನ್ನ ಪ್ರತಿ ಹೆಜ್ಜೆ-ಹೆಜ್ಜೆಯನು ಜನತೆಯೊಡಗೆ ಬೆಳಸಿದೆಯಮ್ಮ
ನಿನ್ನ ಪ್ರತಿ ತುತ್ತು-ತುತ್ತಿನಲಿ ಸೌಜನ್ಯತೆಯ ಬೆರಸಿದೆಯಮ್ಮ
ನನ್ನ ಪ್ರತಿ ಮಾತು-ಮಾತಿನಲು ಶಾಂತಿ ಎಂಬ ಮಂತ್ರವ ಹೇಳಿಸಿದೆಯಮ್ಮ
ನನ್ನ ಅಮ್ಮನ ಸ್ಥಾನವ ನೀ ತುಂಬಿದೆಯಮ್ಮ

■■■■

# ಹೈದ್ರಾಬಾದ ಕರ್ನಾಟಕ ಸ್ವಾತಂತ್ರ್ಯ ಚಳುವಳಿ

ಶರಣಪ್ಪ ಕುರುಬರ
ಬಿ.ಕಾಂ 2ನೇ ಸೆಮ್

---

ಹೈದ್ರಾಬಾದ ಕರ್ನಾಟಕಕ್ಕೆ ನಾನೇ ಒಡೆಯನೆಂದ ನಿಜಾಮ
ಮುಂದಾಲೋಚನೆ ಹೂಡಿದ್ದ, ಮಾಡಬೇಕೆಂದು ಸಂಪತ್ತಿನ ಜಮ
ಕನ್ನಡನಾಡ ಯೋಧರ ನೋಡಿ ಅವನ ಅಹಂಕಾರವಾಯಿತು ನೆಲಸಮ
ಕನ್ನಡ ನಾಡಿಗೆ ಸ್ವಾತಂತ್ರ್ಯ ಸಿಗಲು ಹಾದಿ ದೊರೆಯಿತು ಬಲು ಸುಗಮ

ಹೈದ್ರಾಬಾದ ಕರ್ನಾಟಕ ವಶಪಡಿಸಿಕೊಂಡಿದ್ದ ನಿಜಾಮ
ಅದನ್ನು ಮರುಪಡೆಯಲು ಕನ್ನಡಿಗರು ಕೈಗೊಂಡರು ಅನೇಕ ಕ್ರಮ
ಕನ್ನಡಾಂಬೆಯ ಕಾಪಾಡಲು ನಮ್ಮ ಯೋಧರು ವಹಿಸಿದರು ಬಹಳ ಶ್ರಮ
ಏಕೆಂದರೆ ತಾಯ್ನಾಡ ಮೇಲೆ ಅವರಿಗೆ ಇದ್ದ ಅಮರ ಪ್ರೇಮ

ಹೈದ್ರಾಬಾದ ಕರ್ನಾಟಕವನ್ನಾಳಬೇಕೆಂಬುದು ನಿಜಾಮನ ಬ್ರಾಂತಿ
ಆ ಬ್ರಾಂತಿಯಿಂದ ಕನ್ನಡನಾಡಲ್ಲುಂಟು ಮಾಡಿದ ಅಶಾಂತಿ
ಅವನ ವಿರುದ್ದ ಕನ್ನಡ ವೀರರು ಕೈಗೊಂಡರು ಅನೇಕ ಕ್ರಾಂತಿ
ಅದರ ಪ್ರತಿಫಲವಾಗಿ ಕನ್ನಡನಾಡಲ್ಲಿ ಬೆಳಗಿತು ವಿಜಯದ ಜ್ಯೋತಿ

ವಲ್ಲಭಬಾಯಿ ಪಟೇಲರೇ ನನ್ನ ಪ್ರಕಾರ ಕನ್ನಡದ ಗಾಂಧಿ
ನಿಜಾಮನ ವಿರುದ್ದ ಚಳುವಳಿಗೆ ಇವರೆ ಹಾಕಿದರು ಬುನಾದಿ
ಜನರ ಸಹಕಾರದಿಂದ ಅವನ ಆಡಳಿತಕ್ಕೆ ಹಾಡಿದರು ನಾಂದಿ

▪▪▪▪

## ಸಮಯದ ಮಹತ್ವ

ಮಹೇಶ ಹಿರೇಮಠ

ಬಿ.ಎ. 4ನೇ ಸೆಮ್

- ಜೀವನದಲ್ಲಿ ಒಂದು ವರ್ಷದ ಮಹತ್ವ ತಿಳಿಯಬೇಕಾದರೆ ಅದನ್ನು ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಕೇಳಬೇಕು.
- ತಿಂಗಳಿನ ಮಹತ್ವ ತಿಳಿಯಬೇಕಾದರೆ ಎಂಟು ತಿಂಗಳಿನಲ್ಲಿಯೇ ಮಗುವಿಗೆ ಜನ್ಮ ನೀಡಿದ ತಾಯಿಯನ್ನು ಕೇಳಬೇಕು.
- ಒಂದು ವಾರದ ಮಹತ್ವ ತಿಳಿಯಲು ಯಾವುದೇ ವಾರದ ಪತ್ರಿಕೆಯ ಸಂಪಾದಕರನ್ನು ಕೇಳಬೇಕು.
- ಒಂದು ದಿನದ ಮಹತ್ವ ತಿಳಿಯಬೇಕಾದರೆ ದಿನಗೂಲಿ ನೌಕರರನ್ನು ಕೇಳಬೇಕು.
- ಒಂದು ಗಂಟೆಯ ಮಹತ್ವ ತಿಳಿಯಬೇಕಾದರೆ, ಅರ್ಧ ರಾಜ್ಯವನ್ನು ಕೊಟ್ಟು ತನ್ನ ಸಾವನ್ನು ಒಂದು ಗಂಟೆ ಮುಂದು ಮಾಡಲು ಹೇಳಿದ ಚಕ್ರವರ್ತಿ ಸಿಖಂದರನಿಂದ ತಿಳಿಯಬೇಕು.
- ಒಂದು ನಿಮಿಷದಮಹತ್ವ ತಿಳಿಯಬೇಕಾದರೆ ಅಮೇರಿಕಾದ ಟ್ರೇಡ ಸೆಂಟರ್ ಕಟ್ಟಡ ಬೀಳುವ ಒಂದು ನಿಮಿಷ ಮುನ್ನ ಸುರಕ್ಷಿತವಾಗಿ ಹೊರಬಂದ ಭಾಗ್ಯಶಾಲಿಗಳನ್ನು ಕೇಳಬೇಕು.
- ಒಂದು ಸೆಕೆಂಡಿನ ಮಹತ್ವ ಒಲಂಪಿಕ್ ನಲ್ಲಿ ಒಂದು ಸೆಕೆಂಡಿನಲ್ಲಿ ಸುವರ್ಣ ಪದಕ ತಪ್ಪಿಸಿಕೊಂಡು ರಜತ ಪದಕ ಪಡೆದ ಓಟಗಾರನನ್ನು ಕೇಳಬೇಕು.

# ರೈತ ಅನ್ನದಾತ

ಶರಣಪ್ಪ ಹಿರೇಕುರುಬರ
ಬಿ.ಕಾಮ್. 6ಸೆಮ್

ಭಾರತದ ಬೆನ್ನೆಲುಬು ರೈತ
ನಿಜವಾಗಲು ಭೂತಾಯಿಯ ಸುತ
ಎತ್ತುಗಳ ಮೇಲೆ ರೈತ ಅವಲಂಬಿತ

ಕೃಷಿಯೇ ರೈತನ ಜೀವನಾಧಾರಿತ
ಮಳೆ ದೇವನನ್ನು ಸದಾ ಹಾರೈಸುತ
ಭೂತಾಯಿಯನ್ನು ಉಳುಮೆ ಮಾಡುತ

ಮನುಕುಲಕೆ ರೈತನೆ ಅನ್ನದಾತ
ರೈತ ಸದಾ ಬಯಸುವ ಇತರರ ಹಿತ
ಇತರರೆಲ್ಲರು ರೈತನ ಉತ್ಪಾದನೆಯ ಮೇಲೆ ಅವಲಂಬಿತ

ತನ್ನ ಜೀವನದ ಅವಶ್ಯಕತೆಗಳನ್ನು ತಾನೇ ತಯಾರಿಸುವನು ಸ್ವತಃ
ರೈತನಲ್ಲಿ ಸ್ವಲ್ಪವು ಇಲ್ಲ ಸ್ವಾರ್ಥ
ತನ್ನ ಉತ್ಪಾದನೆಯನ್ನು ಮಾಡುವುದಿಲ್ಲ ವ್ಯರ್ಥ

ಉತ್ತಮ ಫಲವ ಪಡೆಯಲು ಸದಾ ದುಡಿಯುತ
ಸದಾ ಸಕಲರ ಯಶಸ್ಸನ್ನು ಬಯಸುತ
ತನ್ನ ಉತ್ಪಾದನೆಯನು ಇತರರಿಗೆ ಉಣಬಡಿಸುತ

ಮಳೆಯ ಅಭಾವದಿಂದ ಉಂಟಾದರು ಬೆಳೆಯ ಕುಂಠಿತ
ರೈತನ ಉತ್ಪಾದನೆಗೆ ಉಂಟಾದರು ಬೆಲೆಯ ಏರಿಳಿತ
ಸ್ವೀಕರಿಸುವನು ಅದನ್ನು ಸಹರಿಸುತ

ತನ್ನ ಸ್ವಾರ್ಥತೆಯನ್ನು ನಿರಾಕರಿಸುತ
ಇತರರ ಸಂಕಷ್ಟವನ್ನು ಸಹನೆಯಿಂಧ ನಿವಾರಿಸುತ
ದೇಶದ ಅಭಿವೃದ್ಧಿಗೆ ಹೆಚ್ಚು ಶ್ರಮಪಡುತ

ತನ್ನ ಉತ್ಪಾದನೆಯ ಫಲವನು ಇತರರಿಗೆ ಉಣಬಡಿಸುತ
ಬಡವರ ಹೊಟ್ಟೆ ತುಂಬಿಸುವದೇ ರೈತ ನಡೆಯುವ ಪಥ
ತನ್ನ ಜೊತೆಗೆ ಇತರರನ್ನು ಸಾಗಿಸುವನು ಉತ್ತಮ ದಾರಿಯತ್ತ

# ರೈತ ನಕ್ಕರೇ ಜಗವೆಲ್ಲ ಸಕ್ಕರೆ

ಶಿವಕುಮಾರ ಕುಟಗನಹಳ್ಳಿ
ಬಿ.ಎ. 2ನೇ ಸೆಮ್

ವಿದ್ಯೆ ಕಲಿತರೂ ವಿನಯುವಂತರಾಗಬೇಕಿತ್ತು, ಆದರೆ ಹಾಗಾಗಲಿಲ್ಲ. ಹಣವಂತರು ದಾನಿಗಳಾಗಬೇಕಿತ್ತು.ಆದರೆ ಹಾಗಾಗಲಿಲ್ಲ.ಬಹುಜನರು ಒಬ್ಬ ಗುರುಮಾರ್ಗದರ್ಶನದಲ್ಲಿ ಹೋಗಬೇಕಾಗಿತ್ತು ಆದರೆ ಹಾಗಾಗಲಿಲ್ಲ ಮತ್ತೆ ಮುಂದೆ ಗುರಿಯಿರಲಿ ಹಿಂದೆ ಗುರು ಇರಲಿ.ಗುರು ಇಲ್ಲದೇ ಇದ್ದರೆ ನಾವು ಸಾಧನೆ ಮಾಡಲು ಸಾವಿರ ವರ್ಷ ಬೇಕಾಗುತ್ತದೆ.ಇದೆಲ್ಲಾ ಮಾಡಲು ಸಮಾನತೆ, ಸಮಾಜ ನಿರ್ಮಾಣವಾಗಲು ಅಲ್ಲವೇ ನನ್ನ ಸಣ್ಣ ನೋವು ಬಹುತೇಕ ಹತಾಶೆ.

ನಿಂಬೆ ಹಣ್ಣು ಮಾರು ಅಜ್ಜಿಯ ಹತ್ತಿರ ಚೌಕಾಸಿ ಮಾಡುತ್ತೀರಿ. ಹಣ್ಣು ಮಾರುವವನ ಹತ್ತಿರ ಪೌರುಷ ತೋರಿಸುತ್ತೀರಿ. ಎಳೆನೀರು ಮಾರುವವನ ಬಳಿ ಜುಗ್ಗತನ ತೋರಿಸುತ್ತೀರಿ.ಕಡಲೆಕಾಯಿ ಮಾರುವವನ ಜೊತೆ ಜಗಳವಾಡುತ್ತೀರಿ. ಹೂವಿನವರ ಜೊತೆ ಜಿಪುಣತನ ತೋರುತ್ತೀರಿ. ನಿಮಗೆ ಗೊತ್ತೆ ಭತ್ತ ಬೆಳೆಯುವವನ ಕಷ್ಟ?ಭತ್ತ ಬೆಳೆಯಲು ಎಷ್ಟು ದಿನ ಬೇಕೆಂದು?ಎಷ್ಟು ಜನ ಶ್ರಮಪಡಬೇಕು?ಕಟಾವು ಮಾಡುವಾಗ ಸುರಿಯುವ ಬೆವರಿನ ಬೆಲೆ ನಿಮಗೆ?ಗೊತ್ತೆ.

ನಮ್ಮ ಮನೆಯಲ್ಲಿ ದೊರೆಯುವ ಅನ್ನ ಕಂಪ್ಯೂಟರಿನಲ್ಲಿ ತಯಾರಾದದ್ದಲ್ಲ, ನಾವು ಊಟ ಮಾಡತಕ್ಕಂತಹ ಅಕ್ಕಿ ಇಂಟರ್‌ನೆಟ್‌ನಲ್ಲಿ ಬೆಳೆದದ್ದಲ್ಲ. ಅದು ರೈತರ ಬೆವರಿನ ಹನಿಗಳಿಂದ ಬೆಳೆಸಿದ್ದು.ತಾಕತ್ ಇದ್ದರೆ ಪಿಜಾ, ಬರ್ಗರ್‌ನಲ್ಲಿ ಚೌಕಾಸಿ ಮಾಡಿ, ತಾಕತ್ ಇದ್ದರೆ ಶಾಪಿಂಗ್ ಮಾಲ್‌ನಲ್ಲಿ ಕೊಸರಾಡಿ, ಶಕ್ತಿ ಇದ್ದರೆ ಮಲ್ಟಿಫ್ಲೆಕ್ಸ್ ಟಿಕೇಟ್‌ಗಳಲ್ಲಿ ಜಗಳವಾಡಿ. ಕ್ಷಮಿಸಿ ಇದು ಯಾರ ವಿರುದ್ದದ ದ್ವೇಷವಲ್ಲ. ನಮ್ಮ ಮನಸ್ಸಿನ ಜಾಗೃತಿಗಾಗಿ ನಿಮ್ಮ ಗಮನ ಸೆಳೆಯಲು ರೈತರ ಶ್ರಮವನ್ನು ನೆನಪಿಸಲು. ಈ ಸಣ್ಣ ಕಥೆಯನ್ನು ನಿಮ್ಮ ಮುಂದೆ ತರುತ್ತೇನೆ. ಒಂದು ಚಿಕ್ಕ ಚಾಕೋಲೇಟಿಗೆ ಎಂ.ಆರ್.ಪಿ.ಬೆಲೆ ಇರುತ್ತೆ.ಆದರೆ ರೈತ ಬೆಳೆದ ಬೆಳೆಗೆ, ಶ್ರಮಕ್ಕೆ ಬೆಲೆಯಿರುವುದಿಲ್ಲ.ಪ್ರಬುದ್ಧ ಮನಸ್ಸು, ಪ್ರಬುದ್ಧ ಸಮಾಜ, ಪ್ರಬುದ್ಧ ಸಮಾಜ, ಪ್ರಬುದ್ಧ ಭಾರತ ಇದು ನಮ್ಮ ದೇಶದ ಪರಿಸ್ಥಿತಿ.ರೈತರು ನಾಟ್ ಔಟ್ ಆಗಿ ನಿಲ್ಲಬೇಕು. ಬಂಧುಗಳೇ ಒಂದು ಕ್ಷಣ ಇಲ್ಲಿ ನೋಡಿ ವಿಕೇಟ್ ಬಿದ್ದರೇ ದೇಶ ಸೋಲುತ್ತೆಂದು ಭಯಬೀಳುವ ದೇಶಭಕ್ತ, ದೇಶಕ್ಕೆ ಅನ್ನ ನೀಡುವ ದೇಹಗಳೆಷ್ಟು ಬೀಳುತ್ತಿದ್ದರೂ ಗಮನ ಕೊಡದ ದೇಶ ಭಕ್ತ?

ಇಷ್ಟವಾದ ಕ್ರಿಕೇಟಿಗರನ್ನು 100 ರನ್ ಮಾಡಲಿ ಎಂದು ದೇವರಿಗೆ ಕೈಮುಗಿದಂತೆ ನಮಗೆ ಗೊತ್ತಿರುವ ರೈತ 100 ಮೂಟೆ ಭತ್ತ ಬೆಳೆಯಲಿ ಎಂದು ಮನಸ್ಸಿನಲ್ಲಿ ಯಾವಾಗಲೂ ಬೇಡಿಕೊಳ್ಳಿ.3 ಗಂಟೆ ಬ್ಯಾಟ್ ಹಿಡಿದು

ಆಡಿದಾತನೇ ದೇವರಾದರೆ ಇಡೀ ಜೀವನವನ್ನೆಲ್ಲಾ ಅನ್ನ ನಿಡಿದಾತನನ್ನು ಏನನ್ನುತ್ತಿಯಾ ದೇಶಭಕ್ತ?ನಿನಗೆ ಎಲ್ಲಾ ಸ್ಟೇಡಿಯಂಗಳ ಪಿಚ್ ಹೇಗಿರುತ್ತೆ ಎಂದು ಗೊತ್ತಿರುತ್ತದೆ. ಮಾರ್ಕೆಟ್ ಹ್ಯಾಡ್ಎಲ್ಲಿದೆಯೆಂದು ನಮಗೆ ಗೊತ್ತಿದೆಯೇ.

ಅನ್ನ ತಿನ್ನುವಂತಹ ಪಾಕಿಸ್ತಾನ ಟೀಮ್ ನಿನ್ನ ದೇಶಕ್ಕೆ ಬರ್ಲ ಅಥವಾ ಬೇಡವ ಎಂದು ಕೇಳಿಕೊಳ್ಳುತ್ತದೆ. ಕೈಯಲ್ಲಿರುವ ಸ್ವದೇಶ ಅಕ್ಕಿನೋ ವಿದೇಶ ಅಕ್ಕಿನೋ ಎಂದು ನಮಗೆ ಗೊತ್ತಾ ದೇಶ ಭಕ್ತ? ಯಾರು? ಯಾವಾಗ? ಎಷ್ಟು? ಸ್ಕೋರ್ ಮಾಡ್ತಾರೆಂದೆಲ್ಲ ಗೊತ್ತಿರುತ್ತದೆ.ನಮಗೆ ದಿನನಿತ್ಯದಲ್ಲಿ ರೈತರು ಸಾಯ್ತಿದ್ದಾರೆ ಎಂದು ಯೋಚನೆ ಮಾಡಿದ್ದೀಯಾ?ಕಾಮೆಂಟ್ರಿ ಕೇಳುತ್ತಾ ಚರ್ಚೆ ಕಾರ್ಯಕ್ರಮ ನೋಡಿದಿಯಾ? 11 ಜನ ಆಟವಾಡಿದ ಆಟಗಾರರ ಬಗ್ಗೆ ಲಕ್ಷ, ಲಕ್ಷ ಜನ ಒದ್ದಾಡ್ತೀವಿ.ಕೋಟಿ ಜನರ ಹಸಿವನ್ನು ನೀಗಿಸುವ ರೈತನ ಬಗ್ಗೆ ನೀ ಏನ್ ಮಾಡ್ತಿದ್ದೀಯಾ ದೇಶಭಕ್ತ?ಇಂಡಿಯಾ ಗೆಲ್ಲಿಸುವವರ ಜೊತೆ ಬದುಕಿಸುವವರ ಬಗ್ಗೆ ಕಾಳಜಿ ಇರಲಿ ದೇಶ ಭಕ್ತ. ಇಲ್ಲಿ ಬೇಕಾಗಿರುವುದು ಆಟವಾಡುವ ಮೈದಾನವಲ್ಲ. ಹಚ್ಚ ಹಸುರಿನ ಹೊಲದ ಮೈದಾನದಲ್ಲಿ ಅದಕ್ಕೆ ನಾಟ್ಔಟ್ ಆಗಿ ನಿಲ್ಲಬೇಕು ಅದಕ್ಕಾಗಿ ನಾವು ಇದರ ಕುರಿತು ಅರಿವನ್ನು ತಂದುಕೊಳ್ಳಬೇಕು ಹಾಗೆಯೇ ಅರಿತು ನಾವು ಸಹಕರಿಸಬೇಕು

▪▪▪▪

# ಜೀವನದ ರೀತಿ ನೀತಿ

ನಿಂಗಪ್ಪ ಬಿ. ಡೊಳ್ಳಿನ
ಬಿ.ಎ. 2ನೇ ವರ್ಷ

ಹಿರಿಯರ ಮಾತುಗಳನ್ನು ಮರೆತು
ಮನಬಂದಂತೆ ಬಯಸಿ
ಬಿರುಗಾಳಿಗೆ ಬಲೆಗೆ ಸಿಕ್ಕಿಬಿದ್ದು
ವಿಲಿವಿಲಿ ಒದ್ದಾಡುತ್ತಿರುವಾಗ
ಅರಿವಾಯಿತು ಜೀವನದ ರೀತಿ–ನೀತಿ

ಮನದೊಳಗಿನ ಮಾತು ಮರುಕಳಿಸಿದಾಗ
ಎದೆಯ ಗೂಡಲ್ಲಿ ಕುಳಿತ ನಿನ್ನ ನೆನಪು ಬಂದು
ಕ್ಷಣ ಕ್ಷಣಕ್ಕೂ ನರಳಿ ಹೋದೆ
ಆಮೇಲೆ ಅರಿವಾಯಿತು ಜೀವನದ ರೀತಿ–ನೀತಿ

ಜೀವ ಹೋಗುವ ಈ ದೇಹ
ನಾಶವಾಗುವ ಈ ಸಂಪತ್ತು
ಮಾಸಿಹೋಗುವ ಈ ಸೌಂದರ್ಯ
ಈ ಮೂರು ದಿನಗಳ ಬಾಳಿನ
ನಡುವೆ ಸೋಸಿ ನೋಡಿದಾಗ
ಉಳಿಯುವುದೊಂದೇ
ಪ್ರೀತಿ... ಪ್ರೀತಿ... ಪ್ರೀತಿ...
ಸ್ನೇಹ... ಸ್ನೇಹ... ಸ್ನೇಹ...



ವೀರೇಶ ಎಸ್.ಕೆ.
ಬಿ.ಕಾಮ್. 6ನೇ ಸೆಮ್

ಜನ ಹೇಳ್ತಾರೆ ಒಳ್ಳೆಯವರು ಸತ್ತು
ನಕ್ಷತ್ರಗಳಾಗುತ್ತಾರೆ ಅಂತ
ಆದರೆ ನಾನು ಹೇಳ್ತೇನೆ
ಒಳ್ಳೆಯ ನಕ್ಷತ್ರಗಳು ಭೂಮಿಗೆ ಬಿದ್ದು
ಉತ್ತಮ ಸ್ನೇಹಿತರಾಗ್ತಾರೆ ಅಂತ

ಎಲ್ಲರಿಗೂ ಎಲ್ಲರೂ ಇಷ್ಟವಾಗಲ್ಲ
ನಮಗಿಷ್ಟವಾದವರೆಲ್ಲ ನಮ್ಮನ್ನು
ಇಷ್ಟಪಡಲೇ ಬೇಕಿಲ್ಲ
ಇಷ್ಟಪಟ್ಟವರೆಡೆ ಒಲಿದು ಹೋದರೆ
ಜೀವನವೆಂದೂ ಕಷ್ಟವಲ್ಲ

ಮಣ್ಣಿನ ಮೇಲೆ ಮನುಷ್ಯನಿಗಾಸೆ
ಮಣ್ಣಿಗೂ ಮನುಷ್ಯನ ಮೇಲಾಸೆ
ಆದರೆ ಕಡೆಗೂ ಗೆಲ್ಲೋದು
ಮಣ್ಣೇ ಹೊರತು ಮನುಷ್ಯನಲ್ಲ

ಪ್ರೀತಿ ಎಂಬುದು ಕೆಸರಿನಲ್ಲಿ
ಹುಟ್ಟಿದ ಕಮಲದಂತೆ
ಅದಕ್ಕೆ ಜಾತಿ ಬೇದವಿಲ್ಲ
ಬಡವ ಬಲ್ಲಿದನಿಲ್ಲ
ವಯಸ್ಸಿನ ಅಂತರವಿಲ್ಲ
ರೂಪ–ಕುರೂಪದ ಮಾತಿಲ್ಲ

ಹೊಸ ವರ್ಷ ಬಂತೆಂದು
ಹಳೆ ವರ್ಷ ಮರೆಯದಿರು
ಹೊಸ ನೀರು ಬಂತೆಂದು
ಹಳೆ ನೀರು ಮರೆಯದಿರು
ಹೊಸ ಸ್ನೇಕ ಸಿಕ್ಕಿತೆಂದು
ಹಳೆ ಸ್ನೇಹ ಮರೆಯದಿರು
ಸದಾ ಹೀಗೆ ಇರಲಿ ಎಲ್ಲರ ಸ್ನೇಹ ಎಂದೂ

ಮುಂಬರುವ ಜೀವನಕ್ಕೆ ಈಗೇಕೆ ಚಿಂತೆ?
ನಗುತಿರಿ ಎಂದೂ ಆ ಚಂದ್ರನಂತೆ
ಅಳಬೇಡ ನೀವು ಎಂದೂ ಒಬ್ಬಂಟಿಯಾಗಿ
ನಾನಿರುವೆ ನಿಮ್ಮ ಹಿಂದೆ ಎಂದೆಂದೂ ಸ್ನೇಹಿತನಾಗಿ

ಅವಕಾಶ ಸಿಕ್ಕಲ್ಲೆಲ್ಲ ಕನ್ನಡ ಬಳಸಿ
ಅವಕಾಶ ಸಿಕ್ಕಲ್ಲೆಲ್ಲ ಕನ್ನಡ ಕಲಿಸಿ
ಅವಕಾಶ ಸಿಕ್ಕಲ್ಲೆಲ್ಲ ಕನ್ನಡ ತಿಳಿಸಿ
ಅಗತ್ಯವಿದೆ ಈಗ ಕನ್ನಡ ಉಳಿಸಿ
ಈ ವಿಚಾರ ಎಲ್ಲರಿಗೂ ಮನ ಮುಟ್ಟಿಸಿ

ನಾನು ಸತ್ತಾಗ ನನ್ನ ಸುತ್ತ
ಕಣ್ಣೀರು ಸುರಿಸುವ ಸಾವಿರ ಮಂದಿಗಿಂತ
ನಾನು ನೋವಿನಲ್ಲಿರುವಾಗ
ಒಂದು ಕಣ್ಣೀರೊರೆಸುವ ಒಂದು ಕೈ
ಇದ್ದರೆ ಅಷ್ಟೇ ಸಾಕು ಈ ಜಗತ್ತನೆ ಗೆಲ್ಲಲು

ನ್ಯೂಟನ್ ಅರಿಷ್ಟಾಟಲ್‌ರಂತೆ
ಸಿ.ವಿ.ರಾಮನ್‌ರಂತೆ
ಬಾಳಿ ತೋರಿಸು ಮಹಾತ್ಮರಂತೆ
ನಿನ್ನ ಜೀವನ ಆಗುವುದು ಅಜರಾಮರವಂತೆ!!!



ವಿಜಯಲಕ್ಷ್ಮಿ ಎಸ್. ಕುಂಬಾರ
ಬಿ.ಎ. 6ನೇ ಸೆಮ್

## ಆಸೆ

ಚಿಟ್ಟೆಯಂತೆ ಹಾರುವಾಸೆ
ಮನದ ಮೂಲೆಯಲಿ
ಹಲವು ಬೇಲಿಯಲಿ
ಸಿಲುಕಿಕೊಂಡು ನರಳುತಿರುವೆ
ಎಂದು ನಲಿವೇನೇನೋ ಕಾಣೆ
ಬಯಕೆ ತೋಟದಲಿ
ಆದರೂನು ಕಾಯುತಿರುವೆ
ಭರವಸೆಯ ಆಸೆಯಲಿ

## ಪ್ರತಿರೂಪ

ನೆನಪುಗಳ ಚಟಪಟ ಮಳೆಯಲಿ
ನನ್ನ ಮನದ ಬಯಕೆ ತೀರಲು
ತೊಯ್ದು ಕುತಿರುವೆ ನಾ
ಎಂದು ಬರುವೆಯೋ ನೀ
ಬಂದ ಮರುನಿಮಿಷಕೆ
ಬದುಕಿಗೆ ಹೊಸ ರೂಪ
ಎಂದು ಕಾಣಸಿಗುವೆಯೋ
ನನ್ನೆದೆಯ ಪ್ರತಿರೂಪ

■■■■

# ಫೇಸ್ ಬುಕ್



ವಿನಾಯಕ ಎಂ. ಪತ್ತಾರ
ಬಿ.ಕಾಂ 2ನೇ ಸೆಮಿಸ್ಟರ್

ಹೃದಯ ಭಾರವಾದಾಗ
ಕನಸುಗಳು ದೂರಾದಾಗ
ನೆನಪುಗಳ ಕೆದಕಿ ಹಗುರವಾಗಲು
ಮನ ಹಂಬಲಿಸಿದಾಗ
"ನಾನು ಫೇಸ್ ಬುಕ್ ಪುಟ ತೆರೆಯತ್ತೇನೆ"

ದೃಷ್ಟಿ ತಾಕುವ ಚಲುವೆಯರು ಕಂಡಾಗ
ಆತ್ಮವಿಶ್ವಾಸ ತುಂಬುವ ಬರಹಗಳು ಸಿಕ್ಕಾಗ
ಮನಬಿಚ್ಚಿ ನಗಲು
ಹಗಲು ಇರುಳೆನ್ನದೆ ಸಂಭ್ರಮಿಸಲು
"ನಾನು ಫೇಸ್ ಬುಕ್ ಪುಟ ತೆರೆಯತ್ತೇನೆ"

ಅಪರೂಪಕ್ಕೆ ಅಪ್ಲೋಡ ಮಾಡಿದ
ಫೋಟೋಗಳ ಲೈಕ್ ಮತ್ತು ಕಮೆಂಟ್
ನೀಡಿದವರ ಮನದಾಳದ ಇಂಗಿತ ಅರಿಯಲು
"ನಾನು ಫೇಸ್ ಬುಕ್ ಪುಟ ತೆರೆಯತ್ತೇನೆ"

ಸಮಾನ ಮನಸ್ಕರ ಜೊತೆಗೂಡಿ
ವಿಚಾರಧಾರೆಗಳು ಹರಡಿ
ಸತ್ಯ ಸ್ವಾಭಿಮಾನದ ಸಾಮರಸ್ಯದ ಬಾಳ್ವೆಗೆ
ಕೈ ಜೋಡಿಸಲು
"ನಾನು ಫೇಸ್ ಬುಕ್ ಪುಟ ತೆರೆಯತ್ತೇನೆ"

ಕವನಗಳು



ಧನುಜ ಸೋಮನಾಥ.ಬಿ
ಬಿ.ಎಸ್ಸಿ 4ನೇ ಸೆಮಿಸ್ಟರ್

ಚಿತ್ರ ವಿಚಿತ್ರ ಜೀವನಾ
ಯಾರಿಗೂ ತಿಳಿಯದ ಮನುಷ್ಯರ ಮನಾ
ಜೀವನದ ಸತ್ಯತೇ ತಿಳಿದರೂ ಪ್ರಾಣಿಗಳ ಮೂಖೇನಾ
ಆಸೆ–ಆಕಾಂಕ್ಷೆಗಳ ನಡುವೆ ಮಾನವನ ಕದನಾ
ಇಷ್ಟದಿಂದ ಕಲಿಯಬೇಕಾದ ಜೀವನಾ
ಕಲಿಯುವುದಾ ಮರೆತು ಕಲಿಸುವರು ಜನಾ

ಜೀವನದಲ್ಲಿ ಸುಗಮದ ಏಳಿಗೇ
ಬರುವುದಿಲ್ಲ ಕಷ್ಟವಿಲ್ಲದೇ ನಾಳಿಗೇ
ಬಿಡದಿರು ಸೋಲಿನ ನಂತರದ ಪ್ರಯತ್ನ ಇಂದಿಗೇ
ಛಲವಿಲ್ಲದೇ ಸಿಗುವುದಿಲ್ಲ ಅರ್ಥ ಬಾಳಿಗೆ

ದೇಹಕ್ಕೆ ಜೀವ ಬರುವ ಮುನ್ನ ಒಂದು ಜೀವಕ್ಕೆ ಕಷ್ಟ
ದೇಹದಿಂದ ಜೀವ ಹೋಗುವ ಮುನ್ನ ಸುತ್ತಲಿನ ಜೀವಕ್ಕೆ ಕಷ್ಟ
ದೇಹದಲ್ಲಿನ ಜೀವಕ್ಕೆ ಜೀವ ತುಂಬುವ ಮುನ್ನ ಜೊತೆ ಸೇರುವ
ಎಲ್ಲಾ ಜೀವಕ್ಕೆ ಕಷ್ಟ
ಇಷ್ಟೆಲ್ಲಾ ಜೀವಕ್ಕೆ ಕಷ್ಟ ಕೊಟ್ಟು ಜೀವನಕ್ಕೆ ಜೀವ ತುಂಬದಿದ್ದರೇ
ದೇಹದ ಜೀವವೇ ನಷ್ಟ

▪▪▪▪

# ಮಂದಿಯ ಮಾತು



ಡಾ. ಬಸವರಾಜ ಪೂಜಾರ
ಸಹ ಪ್ರಾಧ್ಯಾಪಕರು

ಬೆನ್ನ ಹಿಂದಿನ ಬೆಳಕು
ಮುಂದಿನದ ತೋರುವುದೇ ?
ಮುಖದ ಮುಂದೆ ಆಡದ
ಮಂದಿಯ ಮಾತು
ಬಚ್ಚಲ ನೀರಿನಂತಿಕ್ಕುದು ನೋಡಾ
ನೋಡಲಾಗದೀಶ್ವರಾ

## ಗತಿ–ಅವನತಿ

ಗಾಂಧಿ ನೀ
ಗೊಂದಲಗಳ ಗೂಡಿನಲಿ
ಮಮತೆಯ ಮಹಡಿ ಕಟ್ಟಲು ಹೋದಿ
ಖಾದಿಯಲಿ ಕನಿಕರವ ಕಾಣಬೇಕೆಂದಿ
ನಿತ್ಯದಿ ಸತ್ಯವನೇ ಸಾರಬೇಕೆಂದಿ
ಮಾಡು ಇಲ್ಲವೇ ಮಡಿಯೆಂದು ಮಮತೆಯಲೇ ಕರೆದಿ
ಮೆರೆಯಲಿಲ್ಲ, ಮೆರೆದು–ದೊರೆಯಾಗಲೂ ಇಲ್ಲ
ಏನಿಲ್ಲದವರೆಲ್ಲ ಏನಾದರೆಲ್ಲ
ಇಲ್ಲ ಎಂಬುದು ಇವರ ಚರಿತೆಯಲೇ ಬರೆದಿಲ್ಲ
ಒಲ್ಲೆ ಎಂಬುದು ಇವರ ನಾಲಿಗೆಯಲೆ ಇಲ್ಲ
ಬೆಲ್ಲದ ಮಾತು–ಬಣ್ಣದ ಬದುಕು
ಸುಣ್ಣದ ನೀರಿನ ನಿಲುವಿನ ನೀತಿ
ಅರಿವಿರದ ಗತಿ–ಅವನತಿ
ನೀ ಕಂಡ ಭವ್ಯ ಭಾರತದ್ದೋ ಅದೋಗತಿ

▪▪▪▪

## ಹಣ್ಣಾದೋ

ಬಸವನ ನೆನೆದರೆ ಕಸುಗಾಯಿ ಹಣ್ಣಾದೋ
ತಾಯಿ ಕಾಳವ್ವಗೆ
ತಂದೆ ಉರಿಲಿಂಗಗೆ
ಮಹಿಮೆಯ ಮಹಾದೇವಿಗೆ
ಚೊಕ್ಕ ಚೌಡಯ್ಯಗೆ
ಅರಿತ ಅಲ್ಲಮಗೆ
ಸಿದ್ಧಿಯ ಸಿದ್ಧರಾಮಾಗೆ
ಕಾರುಣ್ಯದ ಕಕ್ಕಯ್ಯಗೆ
ಅರಿತಿದ್ದ ಅಪ್ಪಣ್ಣಾಗೆ
ನಿತ್ಯೋತ್ಸಾಯಿ ನೀಲಮ್ಮಗೆ
ಘನಮಹಿಮೆ ಗಂಗಾಂಬಿಕೆಯರ ನೆನೆದರೆ
ಮಾಸೀದ ಮನವೆಲ್ಲ ಹಸನಾಗಿ ಕೂಸಾಗಿ
ಕೂಡಿ ಬಾಳುವ ಮಾತ ಮನೆಯಾಗಿ

## ಮನುಜ

ಯಾರೋ ನೆಟ್ಟ ಆಲವು ಬಿಟ್ಟ ಬೇರಿಗೆ
ಜೋಕಾಲಿ ಜೀಕುವವ
ಮರವ ನೆಟ್ಟ ದಿಟ್ಟನಂತೆ
ನೆಲವನಾಳುವವ
ಮರವ ನೆಟ್ಟ ಮನುಜನನ್ನು
ಮಾಯವಾಗಿಸಿರುವವ

## ಖುಷಿ

ನಗಬೇಡವೇ ನೀ
ಮುಸಿ ಮುಸಿ–
ಮಾಸಿ ಹೋದೀತು
ಮೈಯ್ಯೊಳಗಿನ ನಿನ್ನ ಖುಷಿ

▪▪▪▪

## "ಭ್ರಷ್ಟಾಚಾರ : ಭಾರತದ ಜ್ವಲಂತ ಸಮಸ್ಯೆ"



ಗೌರಿ ಎಸ್.ಕುಂಬಾರ

ಬಿಎ, 6ನೇ ಸೆಮಿಸ್ಟರ್

ಭ್ರಷ್ಟಾಚಾರವೆಂಬುದು ಭ್ರಷ್ಟ ಹಾಗೂ ಆಚಾರ ಎಂಬ ಎರಡು ಪದಗಳನ್ನು ಒಳಗೊಂಡಿದೆ.ಭ್ರಷ್ಟ ಎಂದರೆ ಕೆಟ್ಟ ಹಾಗೂ ಆಚಾರ ಎಂಬ ಪದ ಆಚರಣೆ ಎಂಬರ್ಥ ನೀಡುತ್ತವೆ. ನಮ್ಮ ಸಮಾಜವು ತಲೆತಲಾಂತರದಿಂದ ಶಿಷ್ಟಾಚಾರವೆಂದು ಮಾನ್ಯ ಮಾಡಿರುವ ಆಚರಣೆಗಳನ್ನು ಹೊರತುಪಡಿಸಿ ಉಳಿದೆಲ್ಲ ಆಚರಣೆಗಳು ಭ್ರಷ್ಟಾಚಾರ ಎನಿಸಿಕೊಳ್ಳುತ್ತವೆ.

ಶಿಷ್ಟಾಚಾರದ ಆಚರಣೆಗಳಾದ ನೈತಿಕತೆ, ಉದಾರತೆ, ನಿಸ್ವಾರ್ಥತೆ, ಸೇವಾ ಮನೋಭಾವ, ಸಹಿಷ್ಣುತೆ ಇತ್ಯಾದಿಗಳು ತಾವಾಗಿಯೇ ಬೆಳೆದುಬಂದಿಲ್ಲ. ಬದಲಿಗೆ ಮಾನವನ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಆಚರಿಸಿಕೊಂಡು ಬಂದಿರುವ ರೂಢಿಗಳಾಗಿವೆ.ಸ್ವಾರ್ಥತೆ, ಲಂಚ, ಸ್ವಜನ ಪಕ್ಷಪಾತ, ದುರಾಸೆ, ಸಾರ್ವಜನಿಕ ಹಣದ ದುರುಪಯೋಗ, ಕಾನೂನು ವಿರೋಧಿ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುವುದು, ಅನೈತಿಕ ಬೆಂಬಲ ಇವು ಭ್ರಷ್ಟಾಚಾರದ ಕರಾಳ ಮುಖಗಳು.ಭಾರತದಲ್ಲಿ ಸಾಮಾಜಿಕ ಪಿಡುಗಾಗಿ ಬೆಳೆದ ಈ ಭ್ರಷ್ಟಾಚಾರದ ಬೇರುಗಳು ಅತ್ಯಂತ ಆಳವಾಗಿದ್ದು ಅದರ ಮೂಲವನ್ನು ಹೆಕ್ಕಿ ತೆಗೆಯುವುದು ಸಾಹಸದ ಕಾರ್ಯವೇ ಸರಿ.'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಭಾರತೀಯ ಸಮಾಜದ ಪ್ರತಿ ಸ್ಥರಗಳು ಈ ಭ್ರಷ್ಟಾಚಾರದ ಸೋಂಕಿಗೆ ತಗುಲಿ ನರುಳುತ್ತಿವೆ. ಒಬ್ಬ ಸಾಮಾನ್ಯ ಜವಾನನಿಂದ ಹಿಡಿದು ದಿವಾನನವರೆಗೆ ವ್ಯಾಪಿಸಿರುವ ಈ ಭ್ರಷ್ಟಾಚಾರದಿಂದ ರಾಜಕೀಯ, ಶಿಕ್ಷಣ, ವೈದ್ಯಕೀಯ, ಕ್ರೀಡೆ, ವ್ಯವಹಾರ, ರಕ್ಷಣೆ, ಕಂದಾಯ, ಸಮಾಜ ಕಲ್ಯಾಣ ಯಾವ ಇಲಾಖೆಗಳೂ ಸಹ ಇದರ ಹೊರತಾಗಿಲ್ಲ.ಆಡಳಿತದ ಅದಕ್ಷತೆ, ಬಡತನ, ಅನಕ್ಷರತೆ, ಮೌಲ್ಯಗಳ ಕೊರತೆ, ಆರ್ಥಿಕ ಅಸಮಾನತೆ, ವ್ಯಕ್ತಿತ್ವ ರಹಿತ ರಾಜಕಾರಣ, ಕಾನೂನುಗಳ ಸಂಕೀರ್ಣತೆ, ಸರಕಾರದ ವಿಳಂಬ ಧೋರಣೆಗಳು ಅವಿಭಕ್ತ ಕುಟುಂಬ ಇತ್ಯಾದಿಗಳು ಭಾರತದಲ್ಲಿ ಭ್ರಷ್ಟಾಚಾರಕ್ಕೆ ಮೂಲ ಕಾರಣಗಳು.

ಪ್ರಸ್ತುತ ಭಾರತವು ಭ್ರಷ್ಟಾಚಾರದ ಪಿಡುಗಿಗೆ ಸಿಲುಕಿ ಸುಣ್ಣವಾಗುತ್ತಿರುವುದರ ಜೊತೆ ಜೊತೆಗೆ ದೇಶದ ಸುಶಿಕ್ಷಿತರೇ ಬಹುತೇಕ ಸರಕಾರಿ ನೌಕರರೇ ಹೆಚ್ಚಿನ ಪ್ರಮಾಣದ ಭ್ರಷ್ಟಾಚಾರದಲ್ಲಿ ತೊಡಗಿರುವವರೆಂಬುದು ಬಹುಮತ ಅಭಿಪ್ರಾಯವಾಗಿರುವಂತದ್ದು.ಇತ್ತೀಚಿನ ಜನಗಣತಿಯ ಪ್ರಕಾರ ಭಾರತ 125 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು ಅದರಲ್ಲಿ 74 ಪ್ರತಿಶತ ಸುಶಿಕ್ಷಿತರಿದ್ದಾರೆ.ಈ ಪ್ರಮಾಣದಲ್ಲಿ ಸುಮಾರು 2.15 ಕೋಟಿ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ.ಇವರಲ್ಲಿ ಸರಿಸುಮಾರು 2 ಕೋಟಿಯಷ್ಟು ಜನ ಸಂಪೂರ್ಣ ಭ್ರಷ್ಟರಾಗಿದ್ದರೆಂದು ಭಾವಿಸಿದರೂ, 125 ಕೋಟಿ ಜನಸಂಖ್ಯೆ ಹೊಂದಿರುವ ಭಾರತವನ್ನ ಕೇವಲ 2 ಕೋಟಿ ನೌಕರರು ಮಾಡುವ ಭ್ರಷ್ಟಾಚಾರ ಅನಭಿವೃದ್ಧಿಯತ್ತ ಕೊಂಡೊಯ್ಯುತ್ತಿದೆ ಎಂದು ನಿರ್ಧರಿಸುವದು ಎಷ್ಟು ಸಮಂಜಸವೆಂಬುದು ಆಲೋಚಿಸಲೇಬೇಕಾದ ಸಂಗತಿ.

ಹಾಗಾದರೆ ಈ ಭ್ರಷ್ಟಾಚಾರ ನಿಯಂತ್ರಣಕ್ಕೆ ಸರಕಾರಗಳು ಕ್ರಮ ಕೈಗೊಂಡಿಲ್ಲವೇ? ಕೈಗೊಂಡಿವೆ ಆದರೆ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳು ಅದೀನ  ಸಮಿತಿಗಳು, ಕಛೇರಿಗಳು ರಾಜಕೀಯ ಪ್ರಭಾವದಿಂದ

ತಡೆಹಿಡಿಯಲ್ಪಟ್ಟಿರುವ ಕಾರಣ ಯಾವುದೂ ಯೋಜನೆ ಯಶಸ್ವಿಯಾಗದಿರುವುದಕ್ಕೆ ವಾಸ್ತವಿಕ ಕಾರಣ.ಭಾರತೀಯ ಸುಪ್ರಿಂಕೋರ್ಟ್ ಜಾರಿಗೆ ತರಲು ಇಚ್ಛಿಸಿದ ಕರಪಶನ್ ಕಮೀಟಿಯ ಸ್ಥಾಪನೆ ನೆನೆಗುದಿಗೆ ಬಿದ್ದಿರುವುದು ಸಹ ಇದೆ ಕಾರಣದಿಂದಲೇ. ಜೊತೆಗೆ ತೀರಾ ಇತ್ತೀಚಿಗೆ ಭ್ರಷ್ಟಚಾರ ನಿಯಂತ್ರಣವನ್ನೇ ಮೂಲ ಉದ್ದೇಶವಾಗಿರಿಸಿಕೊಂಡು ಸರಕಾರ ಕೈಗೊಂಡ ನೋಟು ಅಮಾನ್ಯೀಕರಣ, ಯೋಜನೆಗಳು ಸಹ ಸಂಪೂರ್ಣ ಯಶಸ್ವಿಯಾಗಲಿಲ್ಲ. ಕಾರಣ ಭಾರತದಲ್ಲಿ ಆರ್ಥಿಕ ಅಸಮಾನತೆ, ಸುಶಿಕ್ಷಿತರ ಸಂಖ್ಯೆ ಕಡಿಮೆ ಇದ್ದು ಈ ಯೋಜನೆಗಳು ಸಮಾಜದ ಕೊನೆಯ ಹಂತದ ವ್ಯಕ್ತಿಯನ್ನು ತಲುಪಲು ವಿಫಲವಾಗಿವೆ. ಮನುಷ್ಯನ ಇತಿಹಾಸದಷ್ಟೇ ಪುರಾತನ ಇತಿಹಾಸ ಹೊಂದಿರುವ ಈ ಭ್ರಷ್ಟಾಚಾರ ನಿಯಂತ್ರಣಕ್ಕೆ ಕೇವಲ ಸುಶಿಕ್ಷತರು, ನಗರವಾಸಿಗಳನ್ನು ಗಮನದಲ್ಲಿಟ್ಟು ತರುವ ಯೋಜನೆಗಳು ಫಲ ನೀಡದು ಎಂಬುದಕ್ಕೆ ಈ ಯೋಜನೆಗಳೇ ಪ್ರತ್ಯಕ್ಷ ಉದಾಹರಣೆಗಳು.

**ಪರಿಹಾರೋಪಾಯಗಳು :**

1. ದುಡಿಮೆಗೆ ತ್ಕ ಸಂಬಳ ಸರ್ಕಾರದಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವುದು.

2. ರಾಜಕೀಯ ಪಕ್ಷಗಳ ನಿಧಿ ಸಂಗ್ರಹಣೆಗೆ ಕಟ್ಟುನಿಟ್ಟಿನ ನಿಯಮ ರೂಪಿಸುವುದು.

3. ಭ್ರಷ್ಟಾಚಾರದಲ್ಲಿ ತೊಡಗುವ ಸರಕಾರಿ ನೌಕರರನ್ನು ಶಾಶ್ವತವಾಗಿ ಅಮಾನತ್ತು ಮಾಡುವ ನಿಯಮ ಜಾರಿಗೆ ತರುವುದು.

4. ಸರಕಾರದ ಎಲ್ಲಾ ಬಗೆಯ ಆಡಳಿತವನ್ನು ಜನಸಾಮಾನ್ಯರ ಮುಂದೆ ಪಾರದರ್ಶಕವಾಗಿ ತೆರೆದಿಡುವುದು.

5. ಸಾರ್ವಜನಿಕರಲ್ಲಿ ನೈತಿಕತೆ ಮತ್ತು ಜಾಗೃತಿ ಬೆಳೆಸುವುದು.

6. ಸರಕಾರಿ ಶಿಕ್ಷಣ ಸಂಸ್ಥೆಗಳು ಮಗುವಿನ ದೈಹಿಕ ಬೆಳವಣಿಗೆ ಜೊತೆಗೆ ನೈತಿಕ ಬೆಳವಣಿಗೆಯ ಕಡೆ ಹೆಚ್ಚಿನ ಗಮನ ಹರಿಸುವುದು.

7. ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುವ ಸರಕಾರಿ ನೌಕರಿಯಿಂದ ಅಮಾನತು ಮಾಡುವ ನಿಯಮ ತರುವುದು ಇಲ್ಲವೆ ಸರಕಾರದ ಸೌಲಭ್ಯ ಕಡಿತಗೊಳಿಸುವುದು.

8. ರಾಜಕೀಯ ನಾಯಕರ ಶೈಕ್ಷಣಿಕ ಅರ್ಹತೆ ಗುರುತಿಸುವುದು, ಅವರ ನೈತಿಕತೆ ಆಧರಿಸಿ ಪಕ್ಷಗಳು ಟಿಕೆಟ್ ನೀಡುವುದು.

ಉಪಸಂಹಾರ :

ಇಂದು ಭ್ರಷ್ಟಾಚಾರ ನಡೆಯುತ್ತಿರುವುದು ಬಹುತೇಕ ತಿಳಿದವರಿಂದ ಹಾಗೂ ಸುಶಿಕ್ಷಿತರೆಂದು ಸಮಾಜದಲ್ಲಿ ಗುರುತಿಸಲ್ಪಟ್ಟವರಿಂದ ಎಂಬುದು ವಿಷಾದನೀಯ.ಈ ಭ್ರಷ್ಟಾಚಾರ ನಿರ್ಮೂಲನೆ ಕುರಿತು ನಡೆಯುವ ಕಾರ್ಯಕ್ರಮಗಳಿಗೇನೂ ಕೊರತೆಯಿಲ್ಲ. ಆದರೆ ಅದು ಭ್ರಷ್ಟಾಚಾರಿಗಳ ಮನಪರಿವರ್ತನೆಯಾಗದ ಹೊರತು ಸಾಧ್ಯವಾಗದ ಕೆಲಸ. ಹಾಗಾಗಿ ಪ್ರತಿಯೊಬ್ಬರು ಭ್ರಷ್ಟಾಚಾರ ನಿರ್ಮೂಲನೆ ಮಾಡಲು ತಮ್ಮ ಪರಿವರ್ತನೆಯ ಮೂಲಕ ಆರಂಭಿಸಬೇಕು.

■■■■

## ಮ–ಗಳು



ವೀರೇಶ ಎಸ್.ಕೆ.
ಬಿ.ಕಾಂ 6ನೇ ಸೆಮ್

ಮಲ್ಲೇಶಪ್ಪ ಮತ್ತು ಮಹಾದೇವಮ್ಮನ ಮಗನಾದ ಮಂಜುನಾಥನು ಎಂ.ಎ.ಅಧ್ಯಯನ ಮಾಡಿ ಮಂಗಳೂರಿನಲ್ಲಿ ಮನೆಮಾತಾಗಿದ್ದನು.ಮುಂದೆ ಮಂಜುನಾಥನಿಗೆ ಮದುವೆ ಮಾಡಬೇಕೆಂದು ಮಲ್ಲೇಶಪ್ಪನು ವಧೂಗಾಗಿ ಮಂಗಳೂರು, ಮೈಸೂರು, ಮಾದಿನೂರು, ಮೈಲಾಪುರ, ಮಂಗಳಾಪುರ, ಮಂಡಲಗೇರಿ, ಮಂಡ್ಯ, ಮಲಕಾಪುರ, ಮಾಗಡಿ, ಮಡಿಕೇರಿ ಮುಂತಾದ ಕಡೆಗಳಲ್ಲಿ ಹುಡುಕಲು ಮದುವೆ ಮಾಡಿಸುವ (ಬ್ರೋಕರ್) ಮಾವನೊಂದಿಗೆ ಮಾತಾಡಿದನು.ಮುಂದೆ ಬ್ರೋಕರ್ ಮಾವನು ಮದ್ದೂರಿನವರಾದ ಮಲ್ಲಪ್ಪ ಮತ್ತು ಮಲ್ಲಮ್ಮನ ಮಗಳಾದ ಮಂಜುಳಾ ಎಂಬುವವಳನ್ನು ವಧು ಎಂದು ಗುರುತಿಸಿ ಮಾತುಕಥೆ ನಡೆಸಿದರು.

ಮುಂದೆ ಮಾರ್ಚಿನ ಮೊದಲವಾರದಂದು ಮಲ್ಲೇಶಪ್ಪನು ಮನೆಯ ಮಂದಿಯೊಂದಿಗೆ ಮದುವೆ ಮಾತಿಗಾಗಿ ಎಲ್ಲರೂ ಮದ್ದೂರಿನ ಮಲ್ಲಪ್ಪನ ಮನೆಯಲ್ಲಿದ್ದರು.ಮುಂದೆ ಮನೆಯೊಳಗಿನ ಮನೆದೇವರಾದ ಮಹಾಲಿಂಗೇಶ್ವರನ ಮುಂದೆ ಮದುವೆ ಮಾತು ಮಾತನಾಡುವಾಗ ವರನಾದನಾದ ಮಂಜುನಾಥನು ಮಂಜುಳಾಳನ್ನು ಮನಸಾರೆ ಮೆಚ್ಚಿದ. ಮಧುಮಗಳು ಮಾತಾದಡೇ ಮಾತನ್ನು ಮುಖದ ಮಂದಹಾಸದಲ್ಲಿ ಮನ ಮೆಚ್ಚಿದ್ದನ್ನು ಮನೆಯವರಿಗೆ ಮನವರಿಕೆ ಮಾಡಿಸಿದಳು.ಇದಕ್ಕೆ ಮನೆಯವರು ಕೂಡಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.ಹೀಗೆ ಮಾತಾಡುತ್ತಾ ಸಮಯ ಕಳೆಯುತ್ತ ಮುಸ್ಸಂಜೆಯಾಯಿತು.ಮದುವೆ ಮಾತುಕತೆಯ ಮಹಾನಂದವನ್ನು ಮಂಡಕ್ಕಿ, ಮಿರ್ಚಿ, ಮೈಸೂರಪಾಕ್‌ನೊಂದಿಗೆ ಖುಷಿ ಹಂಚಿಕೊಡರು. ನಂತರ ಮದುವೆಯನ್ನು ಮರುವರ್ಷದ ಮೇ ಮಾಹೆಯ ಮೂರನೇ ಮಂಗಳವಾರದಂದು ಮಾಂಗಲ್ಯಧಾರಣವನ್ನು ಮಾಡುವುದಾಗಿ ಮಾತಾಡಿದರು.

ಮತ್ತೇ ಮಾತುಕತೆಯ ಮರುದಿನ ಮಂಜುಳಾನ ಮಾವನು (ಸೋದರಮಾವ) ಮದುವೆಯನ್ನು ಮುರಿಯಬೇಕೆಂದು ಪಣತೊಟ್ಟನು.ಆತ ಮಲ್ಲಪ್ಪನ ಮುಂದೆ ಮಲ್ಲೇಶಪ್ಪನವರ ಮಾನ ತೆಗೆಯಲು ಸಂಚು ರೂಪಿಸಿದ.ಅದು ಮಲ್ಲೇಶಪ್ಪನವರು ಮೂಲತಃ ಮುಸ್ಲಿಂ ಮತದವರೆಂದು ಮುಳ್ಳು ಚುಚ್ಚಿದ.ಆಗ ಅದಕ್ಕೆ ಮಲ್ಲಪ್ಪನು ಹೇಳಿದ "ನೋಡು ಮಲ್ಲೇಶಪ್ಪನವರು ಮುಸ್ಲೀಮರೆ ಇರಲಿ, ಮತ್ತೊಬ್ಬರೆ ಇರಲಿ ಮನುಕುಲ ಒಂದೇ.ಮದುವೆ ಮಾತನ್ನು ಮಾತಾಡಿ ಮುಗಿಸಿದೆ.ಮಧ್ಯದಲ್ಲಿ ಮದುವೆಯನ್ನು ಮುರಿಯಲಾಗುವುದಿಲ್ಲ. ಮನಸಾರೆ ಮೆಚ್ಚಿದ ವರನೊಂದಿಗೆ ಮದುವೆಯನ್ನು ಮಾಡುವುದೆಂದನು".ಇದಕ್ಕೆ ಮಂಜುಳಾಳ ಸೋದರಮಾವ ಬಂದ ದಾರಿಗೆ ಸುಂಕವಿಲ್ಲವೆಂದು ತಿಳಿದು ಮುಖಮುಚ್ಚಿಕೊಂಡು ಮನೆಯತ್ತ ನಡೆದನು.

ಮೇ ಮೂರನೇ ಮಂಗಳವಾರವು ಮಂಗಳೂರಿನ ಮಂಗಳ ಮಂಟಪದಲ್ಲಿ ಮುಂಜಾನೆ

ಮಹಾಜನತೆಯೊಂದಿಗೆ ಮನೆಯ ಮಂದಿಯೊಂದಿಗೆ, ಎರಡು ಕುಟುಂಬಗಳು ಸೇರಿ ಮಹಾ ಮಂತ್ರದೊಂದಿಗೆ ಮಧು ಮಗನಾದ ಮಂಜುನಾಥನು ಮಧು ಮಗಳಾದ ಮಂಜುಳಾಗೆ ಮಾಂಗಲ್ಯಧಾರಣೆ ಮಾಡಿದನು.(ಇದರ ಅರ್ಥ ಇಷ್ಟೇ ಒಂದು ಸಲ ಮನಸಾರೆ ಮೆಚ್ಚಿದ ಮದುವೆಗೆ ಯಾವುದೇ ತರಹದ ಮೂರನೇ ವ್ಯಕ್ತಿಗಳಿಂದ ಮೋಸಕ್ಕೆ ಒಳಗಾಗುವುದು ಮತ್ತು ಅರ್ಥಕ್ಕೆ ಆ ಮದುವೆಯನ್ನು ನಿಲ್ಲಿಸುವುದು ಎರಡೂ ಕುಟುಂಬಗಳಿಗೆ ಗೌರವ ತರುವಂತಹದ್ದಲ್ಲ.ಆದ್ದರಿಂದ ಎಲ್ಲ ರೀತಿಯಿಂದ ಒಪ್ಪಿಗೆಯಿರುವ ಮದುವೆ ಚೆನ್ನಾಗಿ ಇರುತ್ತದೆ ಅಲ್ಲವೇ....

■■■■

## ನೆನಪಿನ ಆ ಹಾಸ್ಟೆಲ್



ಬಸವರಾಜ ಬಂಡಿ
ಬಿ.ಕಾಂ 2ನೇ ಸೆಮಿಸ್ಟರ್

ಕೆಲವರಿಗೆ ಅಮ್ಮನ ಕೈತುತ್ತಿನ ಊಟ ನೆನಪಾಗುವುದು ಹಾಸ್ಟೆಲ್ ಊಟ ಮಾಡಿದಾಗಲೇ.ಮತ್ತೆ ಕೆಲವರುಗಳು ಮನೆಯಲ್ಲಿನ ಖುಷಿ–ಚೇಷ್ಟೆಗಳಿಗೆ ವಿರಾಮ ನೀಡಿದರೆ ಇನ್ನೂ ಕೆಲವರು ಹಾಸ್ಟೆಲ್‌ನಲ್ಲಿ ತಮ್ಮ ಕಪಿಸೈನ್ಯ ಕಟ್ಟಲಿರುತ್ತಾರೆ.ಹಾಗೆ ಹಲವಾರು ಜೀವದ ಗೆಳೆಯರನ್ನು ನೀಡಿದ್ದು ಆ ಹಾಸ್ಟೆಲ್ ಜೀವನ. ಇಂತಹ ಹಾಸ್ಟೆಲ್ ನನ್ನ ಜೀವನ 4ನೇ ತರಗತಿಯಿಂದ ಪ್ರಾರಂಭವಾಯಿತು. ನನ್ನ ಗುರುಗಳಾದ ವಿ.ಎಲ್. ಜಾಲಾಪುರ ನನ್ನ ಮತ್ತು ಅವರ ಮಗ ಮೇಘರಾಜನನ್ನು ಒಂದೇ ಹಾಸ್ಟೆಲ್‌ನಲ್ಲಿ ಬಿಟ್ಟಿದ್ದರು.ಅಣ್ಣ ಮೇಘರಾಜ 7ನೇ ತರಗತಿಯಲ್ಲಿದ್ದರೆ, ನಾನು 4ನೇ ತರಗತಿಯಲ್ಲಿದ್ದೆ.ನಮ್ಮ ಹಾಸ್ಟೆಲ್ ಮಠದಲ್ಲಿತ್ತು.ನಾವುಗಳೆಲ್ಲರೂ ಮುಂಜಾನೆ ಮತ್ತು ಸಾಯಂಕಾಲ ಪ್ರಾರ್ಥನೆ ಮಾಡುತ್ತಿದ್ದೇವು.ನಮ್ಮ ಹಾಸ್ಟೆಲ್‌ನಲ್ಲಿ ಎಲ್ಲಾ ಜಾತಿ, ಧರ್ಮದವರಿದ್ದರು.ನಾವೆಲ್ಲರೂ ಒಂದೆ ಮನೆಯ ಮಕ್ಕಳಂತೆ ಇದ್ದೆವು.ಹಿಂದೂ ಮುಸ್ಲಿಂ ಎನ್ನದೇ ಎಲ್ಲ ಧರ್ಮದವರು ಅಲ್ಲಿ ಇದ್ದದ್ದು.ನಮ್ಮ ಅಣ್ಣನ ಗೆಳೆಯ ಸಾಧಿಕ್ ಜಾಫರ್ ಕೂಡ ನಮ್ಮೊಂದಿಗೆ ಪ್ರಾರ್ಥನೆಗೆ ಬರುತ್ತಿದ್ದರು. ಹಾಗೆ ಹಲವಾರು ಭಾಷೆಗಳನ್ನಾಡುವವರೂ ತೆಲಗು, ತಮಿಳು, ಲಂಬಾಣಿ ಹೀಗೆ ಎಲ್ಲ ಪಂಗಡದವರು ನಮ್ಮ ಜೊತೆಯಲ್ಲಿದ್ದರು. ಇದರಿಂದಾಗಿ ನಮ್ಮೆಲ್ಲರಿಗೆ ಅವರುಗಳ ಸಂಸ್ಕೃತಿ, ಆಚರಣೆಗಳ ಬಗ್ಗೆ ತಿಳಿದುಬಂದಿದೆ.ಭಾನುವಾರ ಬಂತೆಂದರೆ ಸಾಕು ನಮಗೆಲ್ಲಾ ಖುಷಿಯಾಗುತ್ತಿತ್ತು.ನಾವು ಹಾಸ್ಟೆಲ್ ಬಿಟ್ಟು ಕಬ್ಬಿನ ತೋಟಕ್ಕೆ ಹೋಗುತ್ತಿದ್ದೇವು.ಸಾಕಷ್ಟು ಕಬ್ಬು ತಿಂದು ಅಲ್ಲಿದ್ದ ಹೊಳೆಗೆ ಈಜಾಡಲು ಹೋಗುತ್ತಿದ್ದೇವು.ಒಂದು ದಿನ ವಾರ್ಡನ್ ಊಟದ ಹೊತ್ತಿಗೆ ಭೋಜನಾಲಯದ ಹೊರಗಡೆ ನಿಂತು ನಮಗೆ ಬೆತ್ತದ ರುಚಿ ತೋರಿಸಿದ್ದರು.ಆದರೂ ನಾವು ಅವರ ಕಣ್ಣತಪ್ಪಿಸಿ ಈಜಾಡಲು ಹೋಗುತ್ತಿದ್ದೇವು.ನಮ್ಮ ಗುಂಪಿನಲ್ಲಿ ಯಾರಿಗಾದರೂ ಉಷಾರ ಇಲ್ಲವಾದರೆ ಅವರುಗಳಿಗೆ ತುಂಬಾ ಕೇರ್ ತೆಗೆದುಕೊಳ್ಳತ್ತಾ ಇದ್ದೇವು.

ಹೀಗೆಯೇ ಹಲವು ವಿಧದಲ್ಲಿ ಮಾನವ ಪ್ರೀತಿಯ ಮನೆಯಾಗಿ ಅಲ್ಲಿದ್ದ ನಮ್ಮನ್ನೆಲ್ಲಾ ಸಾಕಿ ಬೆಳೆಸಿದ ಆ ಹಾಸ್ಟೇಲ್ ದೇವ ಸ್ವರ್ಗ ಲೋಕಗಳನ್ನೆಲ್ಲ ದೂರ ಸರಿಸಿದ ಸವಿ ನೆನಪಿನ ಸಂಸ್ಕಾರದ ಸತ್ಯದ ಸತ್ವಯುತದ ಸಮೀಪದ ಸ್ವರ್ಗವದು.

▪▪▪▪

## ಅಕ್ಕರೆಯ ಅಮ್ಮನಿಗೆ ಸಕ್ಕರೆಯ ಸವಿನುಡಿ



ಮಂಜುಳಾ ಎನ್.
ಬಿ.ಎ 6ನೇ ಸೆಮಿಸ್ಟರ್

'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರು, ಜನನಿಯಿಂದ ಪಾಠ ಕಲೆತ ಜನರು ಧನ್ಯರು' ಎಂಬ ಕವಿವಾಣಿಯೂ ಪ್ರಸಿದ್ಧವಾಗಿದೆ.ಒಂದು ಹೆಣ್ಣು ತನ್ನ ಗರ್ಭದಲ್ಲಿ ಮಗು ಜನಿಸುತ್ತಿದೆ ಎಂದು ತಿಳಿದಕೂಡಲೇ ಆ ಮಗುವಿನ ಸಂಪೂರ್ಣ ಜವಬ್ದಾರಿಯನ್ನು ತನ್ನ ಹೆಗಲಮೇಲಿರಿಕೊಳ್ಳುತ್ತಾಳೆ.ಒಂದು ಸಾಮಾನ್ಯ ಮಹಿಳೆ ಪರಿಪೂರ್ಣವಾಗುವುದು ಅದು ತಾನು ಪಡೆದ ತಾಯ್ತನದ ಭಾಗ್ಯದಿಂದ.ಆದ್ದರಿಂದ ಆ ಹೆಣ್ಣು ತಾನೂ 9 ತಿಂಗಳು ತನ್ನ ಗರ್ಭದಲ್ಲಿ ಹೊತ್ತು ಅನೇಕ ಕಷ್ಟ ಕಾರ್ಪಣ್ಯದ ಫಲವಾಗಿ ಸಿಕ್ಕ ಉಡುಗೊರೆಯೇ ಆ ಕಂದ.ತೊದಲ ನುಡಿಯ ಕಂದನ ಬಾಯಿಂದ ಮೊದಲ ಬಾರಿಗೆ ಅಮ್ಮ ಎಂಬ ಪದಕ್ಕೆ ಹೆಣ್ಣನ್ನು ಸಾರ್ಥಕಗೊಳಿಸಿವ ಶಕ್ತಿಯಿದೆ. ಆಕೆಯ ಬಗ್ಗೆ ವರ್ಣಿಸುತ್ತಾಹೋದರೆ ಪದಗಳೇ ಸಾಲುತ್ತಿಲ್ಲವೆಂದು ಅನ್ನಿಸುತ್ತವೆ. ಹೌದು ಅಮ್ಮನನ್ನು ಯಾವುದೇ ಪದದಲ್ಲಿ ವರ್ಣಿಸಲು ಹೋದರೇ ಆಕೆಯ ಪಾತ್ರದೆದುರು ಆ ಪದವೇ ಸೋತು ಬಿಡುತ್ತದೆ.ಒಂದು ಪದದಲ್ಲಿ ಅಥವಾ ವ್ಯಾಕ್ಯದಲ್ಲಿ ವಿವರಿಸಲಾಗದ ಪದವೇ ಅಮ್ಮ.ಅಕ್ಷರದಿಂದ ಅಮ್ಮಂದಿರನ್ನು ವರ್ಣಿಸಲು ಸಾಧ್ಯವಿಲ್ಲ. ಅಮ್ಮ ಎಂದರೇ ನಿಸ್ವಾರ್ಥ ಪ್ರೀತಿಯ ರೂಪ ಮತ್ತು ಜೀವನದ ಆತ್ಮೀಯ ಗೆಳತಿಯೆಂದರೇ ತಪ್ಪಿಲ್ಲ.

ಸ್ವಾರ್ಥವಿಲ್ಲದ ಪ್ರೀತಿ ಎಂದರೇ ಅಮ್ಮನದು ಮಾತ್ರ.ಆಕೆಯು ತನ್ನ ಮಕ್ಕಳ ಖುಷಿಗಾಗಿ ತನ್ನ ಸುಖ–ಸಂತೋಷಗಳನ್ನೇ ತ್ಯಾಗ ಮಾಡುವ ಕರುಣಾಮಯಿ ಎಂದೇ ಖ್ಯಾತಿಯಾಗಿರುವಳು.ಆದ್ದರಿಂದ ಕಣ್ಣಿಗೆ ಕಾಣಿಸುವ ಒಂದೇ ಒಂದು ದೇವರೆಂದರೇ ಅದು ತಾಯಿ ಆಗಿರುವಳು.ಮಕ್ಕಳ ಉಜ್ವಲ ಭವಿಷ್ಯದ ಕುರಿತು ತಾನು ಗರ್ಭವತಿ ಇರುವಾಗಲೇ ಸಾಕಷ್ಟು ಕನಸನ್ನು ಕಂಡಿರುವ ಕನಸುಗಾರ್ತಿ ಆಗಿರುವಳು.ತನ್ನ ಹಸಿವನ್ನು ಲೆಕ್ಕಿಸದೇ ಮಕ್ಕಳ ಹಸಿವನ್ನು ನೀಗಿಸುವ ಅನ್ನದಾತೆಯೆಂದು ಕರೆಯುವುದರಲ್ಲಿ ಸಂಶಯವಿಲ್ಲ.

ಅಷ್ಟೇ ಏಕೆ ನಾವು ನಮ್ಮ ನೆಲವನ್ನು ಭಾರತಮಾತೆ, ಕರ್ನಾಟಕ ಮಾತೆ ಎಂದು ಮಾತೃಸ್ವರೂಪದಲ್ಲಿ ಭಾವಿಸುತ್ತೇವೆ. ಭಾರತದಲ್ಲಿ ಜನಿಸಿದ ಮಹಾನ್ ವಿದ್ವಾಂಸರು, ಪಂಡಿತರೆಲ್ಲರಿಗೂ ಮಾರ್ಗದರ್ಶಿ ಆದ್ದರಿಂದಲೇ ತಾಯಿಯೇ ಮೊದಲ ಗುರುವೆನ್ನುವರು.ಕನ್ನಡದ ಕವಿಗಳು ತಮ್ಮ ತಾಯಿಯ ಪ್ರೀತಿ, ವಾತ್ಸಲ್ಯವನ್ನು ನೆನೆದು ಅನೇಕ ವಾತ್ಸಲ್ಯ ಗೀತೆಗಳನ್ನು ಬರೆದಿದ್ದಾರೆ. ಕೆ.ಎಸ್.ನರಸಿಂಹಸ್ವಾಮಿ ತಾಯಿ ಮತ್ತು ಮಗುವಿನ ಸಂಬಂಧವನ್ನು ಗುಡಿ ತೇರಿನ ಪ್ರತಿಮೆಯಲ್ಲಿ ನಿಲ್ಲಿಸಿದ್ದಾರೆ.

"ತಾಯಿ ತೋಳಿಂದ ಜಾರಿದ ಕಂದ ದೂಳಿನಲಿ ತೆವಳಿ ಬರುವುದು ಮತ್ತೆ ತಾಯಿಯ ಬಳಿಗೆ ಗುಡಿಯಿಂದ

ಹೊರಟು ದೇವರನು ಮೆರೆಸಿ ಬೀದಿಯಲಿ ತೇರು ಹಿಂದಿರುಗುವುದು ಗುಡಿಯ ಬಳಿಗೆ"ಎಂದು ಹೇಳುವ ಮೂಲಕ ತಾಯಿ ಮತ್ತು ಮಗುವಿನ ನಡುವಿನ ನಂಟನ್ನು ತಿಳಿಸಿದ್ದಾರೆ.

ಜಗತ್ತಿನಲ್ಲಿ ಮಕ್ಕಳಾದವರು ತಾಯಿಗೆ ಕಷ್ಟ, ಮೋಸ, ಅನ್ಯಾಯ ಮಾಡಿರುವುದನ್ನು ನಾವು ನೋಡುತ್ತೇವೆ. ಆದರೆ ಇಲ್ಲಿಯವರೆಗೂ ತಾಯಿಯಾದವಳು ಯಾವುದೇ ರೀತಿಯಲ್ಲೂ ಮಕ್ಕಳಿಗೆ ಮೋಸ, ಅನ್ಯಾಯ ಮಾಡಿರುವುದು ಚರಿತ್ರೆಯಲ್ಲೇ ಇಲ್ಲ. ಆದ್ದರಿಂದಲೇ ಶಂಕರಾಚಾರ್ಯರು "ಕೆಟ್ಟ ಮಕ್ಕಳು ಹುಟ್ಟಬಹುದು, ಆದರೆ ಕೆಟ್ಟ ತಾಯಿ ಹುಟ್ಟಲಾರಳು" ಎಂದು ಹೇಳಿರುವುದು ತಾಯಿಯ ಚಾರಿತ್ರ್ಯವನ್ನು ತಿಳಿಸುತ್ತದೆ. ಮಕ್ಕಳು ಎಷ್ಟೇ ನೋವನ್ನು ಕೊಟ್ಟರೂ ಸಹಿಸಿಕೊಂಡು ಕೊನೆಗೂ ತನ್ನ ಮಕ್ಕಳೇ ಅವರು ಎಂದು ಪ್ರೀತಿಸುವ ಹೃದಯವೆಂದರೆ ಅದು ಅಮ್ಮ ಮಾತ್ರ.ಆದ್ದರಿಂದಲೇ 'ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ' ಎನ್ನುವ ಉಕ್ತಿಯು ತುಂಬಾ ಅರ್ಥಪೂರ್ಣವಾಗಿದೆ.

ತಾಯಿ ಮಾಡಿದ ತ್ಯಾಗಕ್ಕೆ ಪರಿಶ್ರಮಕ್ಕೆ ಮೆಚ್ಚುಗೆ, ಒಂದಿಷ್ಟು ಕೃತಜ್ಞತೆಯ ಕಣ್ಣೀರು.ಅದು ಬಿಟ್ಟರೆ ಮತ್ತೇನಿಲ್ಲ. ಆದ್ದರಿಂದಲೇ 'ಎಲ್ಲ ದೇವರಿಗಿಂತ ಮಿಗಿಲು, ಹೆತ್ತ ತಾಯಿಯ ನೆರಳು' ಎಂದರೆ ತಪ್ಪಾಗಲಾರದು.

ಕೊನೆಯದಾಗಿ ಹೇಳುವುದೆಂದರೇ ತಂದೆ-ತಾಯಿ ಇರುವಾಗಲೇ ಅವರನ್ನು ಸಂತೋಷದಿಂದ ಪ್ರೀತಿ ವಾತ್ಸಲ್ಯದಿಂದ ನೋಡಿಕೊಳ್ಳಲು ಪ್ರಯತ್ನಿಸೋಣ ನಾವೆಲ್ಲರೂ ಇಂದಿನಿಂದ.

▪▪▪▪

## ತಂದೆ ತಾಯಿಯರ ಪ್ರೀತಿ



ಹುಲಿಗೆವ್ವ
ಬಿ.ಎ 6ನೇ ಸೆಮಿಸ್ಟರ್

ತಂದೆ ತಾಯಂದಿರು ಈ ಭೂಮಿಗೆ ಕೊಟ್ಟ ಅಪರೂಪದ ಎರಡು ಒಡವೆಗಳು. ಇವುಗಳ ಬೆಲೆಯನ್ನು ನಾವು ತಿಳಿದುಕೊಳ್ಳದಿದ್ರೇ ಹುಟ್ಟಿದರೂ ಸಾರ್ಥಕವಿಲ್ಲದ ಬದುಕು ನಮ್ಮದಾಗುತ್ತದೆ.ತಾಯಿ 9 ತಿಂಗಳು ತನ್ನ ಹೊಟ್ಟೆಯಲ್ಲಿ ಹೊತ್ತುಕೊಂಡು ಬೆಳೆಸಿದರೆ ತಂದೆ ಆ ಮಗುವನ್ನು ಜೀವನದುದ್ದಕ್ಕೂ ಬೆಳೆಸುತ್ತಾನೆ. ತಂದೆ ತಾಯಿಯರ ಋಣವನ್ನು ನಾವು ತೀರಿಸಲು ಸಾಧ್ಯವಿಲ್ಲ. ಅಂತಹನಿಶ್ಕಲ್ಮಶವಾದಂತಹ ಪರಿಶುದ್ಧವಾದಂತಹ ಪ್ರೀತಿ ತಂದೆ ತಾಯಿಯರದಾಗಿದೆ.ಮಕ್ಕಳ ಸೋತರು ಖುಷಿಪಡುತ್ತಾರೆ ಮತ್ತು ಮಕ್ಕಳು ಗೆದ್ದರೂ ಖುಷಿಪಡುತ್ತಾರೆ.ಮಕ್ಕಳು ಅತ್ತರೆ ತಾವು ಕೂಡಾ ಅಳುತ್ತಾರೆ.ಮಕ್ಕಳು ನಕ್ಕರೇ ಅತೀ ಹೆಚ್ಚು ಸಂತೋಷವನ್ನು ಪಡುತ್ತಾರೆ.ಅಂತವರ ಋಣವನ್ನು ನಾವು ಎಂದಿಗೂ ತೀರಿಸಲಾಗದು.ಆದಕಾರಣ ಆ ಎರಡು ದೇವರ ಪ್ರತಿರೂಪಗಳನ್ನು ನಾವು ಚೆನ್ನಾಗಿಯೇ ನೋಡಿಕೊಳ್ಳಬೇಕು.

ದೇವರು ಎಲ್ಲರ ಮನೆಯಲ್ಲಿರಲಾಗದೇ ತನ್ನ ರೂಪದಲ್ಲಿ ತಂದೆ–ತಾಯಿಯರನ್ನು ನೀಡಿದ್ದಾನೆ. ಅವರಲ್ಲಿ ನಾವು ದೇವರನ್ನು ಕಾಣಬೇಕು. ಅದನ್ನು ಬಿಟ್ಟು ಕಾಣದಿರುವ ದೇವರನ್ನು ಎಷ್ಟೊಂದು ಪ್ರೀತಿಮಾಡುತ್ತೇವೆ. ಅದರ ಅವಶ್ಯಕತೆಯಿಲ್ಲ.ಇರುವುದನ್ನು ನಾವು ಮೊದಲು ಸವಿಯಬೇಕು.ಅನುಭವಿಸಬೇಕು ಇಲ್ಲದಿರುವುದನ್ನು ನೆನೆದು ಕೊರಗಬಾರದು.

ಡಾ. ಮನೋಜ ಡೊಳ್ಳಿಯವರು ಹೇಳಿದಂತೆ ನಾವು ಇರುವುದನ್ನು ಅನುಭವಿಸಬೇಕು.ಇಲ್ಲದಿರುವುದರ ಬಗ್ಗೆ ಕೊರಗಿ ಸೊರಗಬಾರದು.ನಮಗೆ ಜನ್ಮವನ್ನು ಕೊಟ್ಟ ತಂದೆ–ತಾಯಿಯರಿಗೆ ನಾವು ಕೈ ತುತ್ತನ್ನು ತಿನ್ನಿಸುವುದಿಲ್ಲ. ಅದು ನಮಗೆ ಅವಮಾನ, ಆದರೆ ನಮ್ಮನ್ನು ತಿರಸ್ಕರಿಸುವವರಿಗೆ ನಾವು ಕೈ ತುತ್ತನ್ನು ತಿನ್ನಿಸುತ್ತೇವೆ. ಇದು ನಮ್ಮ ದುರಂತವಾಗಿದೆ.ಆದ ಕಾರಣ ನಮ್ಮನ್ನು ಭೂಮಿಗೆ ತಂದೆ ತಾಯಿಯರಿಗೆ ಕೈ ತುತ್ತು ತಿನ್ನಿಸೋಣ ಅವರನ್ನು ಪ್ರೀತಿಯಿಂದ ಸದಾ ನೋಡಿಕೊಳ್ಳೋಣ.

ನಾವು ಅತ್ತರೆ ತಂದೆ ತಾಯಿಗಳು ಕೂಡ ನಮಗೆ ಗೊತ್ತಿಲ್ಲದಂತೆ ನೋವನ್ನು ಅನುಭವಿಸುತ್ತಾರೆ.ನಾವು ನಕ್ಕರೆ ಅತೀ ಹೆಚ್ಚು ಸಂತೋಷವನ್ನು ಅವರು ಅನುಭವಿಸುತ್ತಾರೆ.ನಮ್ಮ ನೋವು ನಲಿವುಗಳಿಗೆ ಬಹಳ ಮಹತ್ವವನ್ನು ತಂದೆ ತಾಯಿಗಳು ನೀಡುತ್ತಾರೆ.ನಾವು ಅವರಿಂದಲೇ ಜನಿಸಿ ಅವರ ಮೂಲಕವೇ ಕಲಿತು ದೊಡ್ಡವರಾದ ಮೇಲೆ ಅವರನ್ನು ಮತ್ತು ಅವರ ಪ್ರೀತಿಯನ್ನು ಮರೆತು ಬಿಡುತ್ತೇವೆ. ಅದು ಆಗಬಾರದು ಪ್ರತಿಯೊಬ್ಬರು ತಮ್ಮ ತಂದೆ ತಾಯಿಗಳನ್ನು ಅತೀ ಪ್ರೀತಿಯಿಂದ ನೋಡಿಕೊಳ್ಳಬೇಕು.'ಆಕಾಶದಲ್ಲಿ ಹಾರಾಡುತ್ತಿರುವ ಗಾಳಿಪಟ ಮಾತ್ರ ಎಲ್ಲರಿಗೂ ಕಾಣುತ್ತದೆ.ಆದರೆ ಅದಕ್ಕೆ ಸಹಾಯಮಾಡಿದ ದಾರ ಯಾರಿಗೂ ಕಾಣುವುದಿಲ್ಲ' ಅದೇ ರೀತಿ ನಮ್ಮನ್ನು ದೊಡ್ಡ ಸ್ಥಾನಕ್ಕೆ ತಂದೆ–ತಾಯಿಗಳು ಏರಿಸಿರುತ್ತಾರೆ.ನಾವು ಅವರನ್ನು ಮರೆಯಬಾರದು.

# ಗಾದೆಗಳು

ಸುನಿತಾ ಜಿ
ಬಿ.ಎ 6ನೇ ಸೆಮಿಸ್ಟರ್

ಗಾದೆಗಳು ಪುರಾತನ ಕಾಲದಿಂದಲೂ ಬಹಳಷ್ಟು ರೀತಿಯಲ್ಲಿ ಮಹತ್ವವನ್ನು ಪಡೆದುಕೊಂಡಿವೆ.ಇವುಗಳು ಬಹಳಷ್ಟು ಸತ್ಯದ ವಿಷಯವನ್ನು ತಿಳಿಸಿಕೊಡುತ್ತವೆ.ಅಂತಹ ಗಾದೆಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕಟ್ಟುವುದು ಕಠಿಣ,ಕೆಡವುದು ಸುಲಭ

* ಮಾತು ಬೆಳ್ಳಿ,ಮೌನ ಬಂಗಾರ
* ಕಾಯಕವೇ ಕೈಲಾಸ
* ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ
* ನಾಲಿಗೆ ಒಳ್ಳೆಯದಾರೆ ನಾಡೆಲ್ಲ ಒಳ್ಳೆಯದು
* ಆಳಾಗಿ ದುಡಿ ಅರಸನಾಗಿ ಉಣ್ಣು
* ಊರಿಗೆ ಅರಸನಾದರೂ ತಂದೆಗೆ ಮಗ
* ಬಂಜೆ ಬೇನೆಯನರಿವಳೇ
* ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ
* ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ
* ಹತ್ತು ದೇವರನ್ನು ಪೂಜಿಸುವುದಕ್ಕಿಂತ ಹೆತ್ತ ತಾಯಿಯನ್ನು ಪೂಜಿಸು
* ಮಾತು ಆಡಿದರೆ ಹೊಯಿತು ಮುತ್ತು ಒಡೆದರೆ ಹೊಯಿತು
* ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು
* ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು
* ವೇದ ಸುಳ್ಳಾದರೂ ಗಾದೆ ಸುಳ್ಳಾಗದು
* ಕೂತು ಉಂಡರೆ ಕುಡಿಕೆ ಹೊನ್ನೂ ಸಾಲದು
* ಸತ್ಯವನ್ನು ನುಡಿ ಸತ್ಯಕ್ಕಾಗಿ ದುಡಿ
* ಗಾಳಿ ಬಿಟ್ಟಾಗ ತೂರಿಕೊ
* ಕತ್ತೆಗೇನೂ ಗೊತ್ತು ಕಸ್ತೂರಿ ವಾಸನೆ
* ಗುಣ ನೋಡಿ ಗೆಳೆತನ ಮಾಡು
* ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ
* ಬೆಳ್ಳಗಿರುವುದೆಲ್ಲ ಹಾಲಲ್ಲ
* ಆಸೆಯೇ ದುಃಖಕ್ಕೆ ಮೂಲ

## ಕವನಗಳು



ಅಶ್ವಿನಿ ಎ. ಕಳಸದ
ಬಿ.ಎ 6ನೇ ಸೆಮಿಸ್ಟರ್

ನೇರವಾಗಿ ಮಾತನಾಡುವವರಿಗೆ
ನೋವು ಜಾಸ್ತಿ
ಬಣ್ಣದ ಮಾತನಾಡುವವರಿಗೆ
ಬೆಲೆ ಜಾಸ್ತಿ

A – ಅಪ್ಪ ಅಮ್ಮನ ಬಿಟ್ಟು
R – ರಾತ್ರಿ ಹಗಲು ಎನ್ನದೇ
M – ಮಡದಿ ಮಕ್ಕಳನ್ನು ತೊರೆದು
Y – ಯಾವಾಗಲೂ ದೇಶಕ್ಕಾಗಿ ಪ್ರಾಣ
ಕೊಡುವವನೇ ವೀರಯೋಧ

ದೇವಸ್ಥಾನದಲ್ಲಿ ಗಂಟೆ
ಮರಭೂಮಿಯಲ್ಲಿ ಒಂಟೆ
ನಮ್ ಕಾಲೇಜ್ನಂತೆ
ಇನ್ನೊಂದು ಉಂಟೆ?

ನಿನ್ನ ಕಣ್ಣಲ್ಲಿ ನನ್ನ ಕನಸಿರಬೇಕು
ನಿನ್ನ ತುಟಿಯಲ್ಲಿ ನನ್ನ ಹೆಸರಿಸಬೇಕು
ನಿನ್ನ ಮನಸ್ಸಿನಲ್ಲಿ ನಾನು ತುಂಬಿರಬೇಕು
ನಿನ್ನ ಪ್ರೀತಿ ನನಗಾಗಿ ಮೀಸಲಿರಬೇಕು
ಹೇಳುವೆಯಾ ಇದಕ್ಕಾಗಿ ನಾನೇನು ಮಾಡಬೇಕು?

ಎಸಿಸಿ ಸಿಮೆಂಟ್
ಕೆಇಬಿ ಕರೆಂಟ್
ನಾನು ನನ್ನ ಗೆಳತಿಗೆ ಪರಮನೆಂಟ್

ಎಲೆ ಹುಡುಗಿ ನೀನು ತುಂಬಾ ಬೆಪ್ಪು
ಮಳೆಯಲ್ಲಿ ತೊಳೆಯಿತು ನಿನ್ನ ಮೇಕಪ್ಪು
ಆದರೆ ಬಂತು ಒರಿಜಿನಲ್ ಗೆಟಪ್ಪು

ಭೂಮಿ ಎಂಬ ಎರಡಕ್ಷರದಲ್ಲಿ ಹುಟ್ಟಿ
ಜೀವ ಎಂಬ ಎರಡಕ್ಷರದಲ್ಲಿ ಬೆಳೆದು
ವಿದ್ಯೆ ಎಂಬ ಎರಡಕ್ಷರದಲ್ಲಿ ಕಲಿತು
ಪ್ರೀತಿ ಎಂಬ ಎರಡಕ್ಷರದಲ್ಲಿ ಬೆರೆತು
ಸಾವು ಎಂಬ ಎರಡಕ್ಷರದಲ್ಲಿ ಬರುವ ತನಕ
ಸ್ನೇಹ ಎಂಬ ಎರಡಕ್ಷರವನ್ನು ಮರೆಯದಿರಿ

ಕಾಲೇಜು ಎಂಬುದು ರಸದೂಟ
ಕಾಲು ಜಾರಿ ಬಿದ್ದರೆ ವಿಷದೂಟ
ಹೊರಗಡೆ ಗೆಳೆಯರ ಕಾಟ
ಕ್ಲಾಸಿನಲ್ಲಿ ಗುರುಗಳ ಪಾಠ
ಫೇಲಾದ್ರೆ ಮನೆಯವರ ಕಾಟ
ಪಾಸ್ ಆದ್ರೆ ಕೆಲಸದ ಹುಡುಕಾಟ
ಇದು ವಿದ್ಯಾರ್ಥಿಗಳ ಜೀವನದ ಗೋಳಾಟ

# ಭೈರವ ಮುನಿಯ ಆಶ್ರಮ



**ಅರ್ಪಿತಾ ವಿ. ಹಳ್ಳಿಮಠ**
**ಬಿ.ಎ 6ನೇ ಸೆಮಿಸ್ಟರ್**

ಭೈರವ ಮುನಿಯ ಆಶ್ರಮವು ಕೊಪ್ಪಳ ಜಿಲ್ಲೆ ಕೊಪ್ಪಳ ತಾಲ್ಲೂಕಿನ ಅಳವಂಡಿ ಗ್ರಾಮದಿಂದ ಸುಮಾರು 3 ಕಿ. ಮೀ.ನಷ್ಟು ದೂರದಲ್ಲಿದೆ.ಈ ಆಶ್ರಮದ ವಿಶೇಷತೆಯೆಂದರೆ ರಾಮಾಯಣ ಕಾಲದಲ್ಲಿ ಈ ಪ್ರದೇಶವು ತನ್ನದೇಯಾದ ಪಾತ್ರ ಹಾಗೂ ಅದರದೇಯಾದ ಕುರುಹುಗಳನ್ನು ಹೊಂದಿದೆ.

ರಾಮಾಯಣ ನಡೆದ ಕಾಲದಲ್ಲಿ ರಾಮ, ಸೀತೆ, ಲಕ್ಷ್ಮಣನು ವನವಾಸದಲ್ಲಿ ಇದ್ದ ಸಂದರ್ಭವದು.ಒಂದು ದಿನ ರಾವಣನು ಸೀತೆಯನ್ನು ಅಪಹರಿಸಲು ಬಂದಾಗ ತನ್ನ ಸಹಚರನಿಗೆ ಮಾಯಾ ಜಿಂಕೆಯಾಗಿ ಹೋಗುವಂತೆ ತಿಳಿಸಿದನಂತೆ ಆ ಮಾಯಾ ಜಿಂಕೆಯನ್ನು ಕಂಡ ಸೀತೆಯು ಆ ಜಿಂಕೆಯನ್ನು ತಂದು ಕೊಡುವಂತೆ ರಾಮನಿಗೆ ಕೇಳಿದಾಗ ರಾಮನು ಆ ಜಿಂಕೆಯನ್ನು ಬೆನ್ನಟ್ಟಿ ಹೋದ.ಈ ಸಂದರ್ಭದಲ್ಲಿ ಬಳಸಿಕೊಂಡ ರಾವಣ ಸೀತೆಯನ್ನು ಮಾಯಾ ವೇಷಧಾರಿಯಾಗಿ ಬಂದು ಅಪಹರಿಸಿದ.ಜಿಂಕೆಯನ್ನು ಹಿಂಬಾಲಿಸಿದ ರಾಮ ಆ ಜಿಂಕೆಗೆ ಬಾಣವನ್ನು ಹೊಡೆದ ಸಂದರ್ಭದಲ್ಲಿ ಜಿಂಕೆಯು ಮಾಯವಾಗಿ ಬಾಣವು ಭೂಮಿಯನ್ನು ನಾಟುತ್ತದೆ. ನಂತರ ಆ ಬಾಣ ಕಲ್ಲಿನ ಸ್ವರೂಪ ಪಡೆಯುತ್ತದೆ.ಈ ಬಾಣವು ನಾಟಿದ ಪ್ರದೇಶ ಭೈರವಮುನಿ ಆಶ್ರಮದ ಪ್ರದೇಶವಾಗಿತ್ತೆಂದು ತಿಳಿದು ಬಂದಿದೆ.ಇದು ಒಂದು ಪ್ರತೀತಿಯಾಗಿದೆ.

ಇನ್ನೊಂದು ರೀತಿಯಲ್ಲಿ ರಾಮನು ವನವಾಸಕ್ಕೆ ಹೋದ ಸಂದರ್ಭದಲ್ಲಿ ದಶರಥನು ಮರಣವನ್ನಪ್ಪುತ್ತಾನೆ. ಇದನ್ನು ತಿಳಿದ ರಾಮನು ಹಿರಿಯ ಮಗನಾಗಿದ್ದರಿಂದ ಮರಳಿ ತನ್ನ ರಾಜ್ಯಕ್ಕೆ ಹೋಗದೇ ತನ್ನ ತಂದೆಗೆ ಅಂತಿಮ ಶ್ರದ್ಧಾ ಕಾರ್ಯವನ್ನು ಮಾಡುವ ಸಲುವಾಗಿ ಋಷಿಮುನಿಗಳನ್ನು ಅರಸುತ್ತಾ ಬಂದಾಗ ಒಂದು ಆಶ್ರಮ ಘೋಚರವಾಗುತ್ತದೆ.ಇದೆ ಭರವ ಮುನಿಗಳ ಆಶ್ರಮ. ಅಲ್ಲಿಗೆ ಬಂದ ರಾಮ ಭೈರವ ಮುನಿಗಳಲ್ಲಿ ನಡೆದ ಸಂಗತಿ ತಿಳಿಸಿ ಶ್ರಾದ್ಧ ಕಾರ್ಯಕ್ಕೆ ಯಜ್ಞಮಾಡಬೇಕೆಂಬುದಕ್ಕೆ ಅನುಮತಿ ಪಡೆದು ಯಜ್ಞದ ವಿಧಿಗಳನ್ನು ಮುಗಿಸಿ ತನ್ನ ತಂದೆಯ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಕೋರಿಕೊಳ್ಳುತ್ತಾನೆ. ನಂತರ ಈತನನ್ನು ದಶರಥ ಪುತ್ರ ರಾಮನೆಂದು ತಿಳಿದ ಮುನಿಗಳು ರಾಮನ ದರ್ಶನ ಪಡೆದು ಧನ್ಯವಾದೆವೆಂದು ಹೇಳಿದರಂತೆ. ರಾಮನು ಮಾಡಿದ ಈ ಯಜ್ಞಕ್ಕೆ ಸಹಾಯ ಮಾಡಿದ ಮುನಿಗೆ ಮುಂದೆ ಈ ಪ್ರದೇಶವು ಭೈರಾಪುರ ಎಂಬ ಹೆಸರಿನಿಂದ ಪ್ರಖ್ಯಾತಿ ಪಡೆಯಲಿ ಎಂದು ವರವನ್ನು ನೀಡಿದ ಎಂದು ಹೇಳಲಾಗುತ್ತದೆ.

ಈ ಪ್ರದೇಶದಲ್ಲಿ ರಾಮಾಯಣದ ಕಾಲದಲ್ಲಿ ನಡೆದ ಘಟನೆಯ ಕೆಲವೊಂದು ಕುರುಹುಗಳು ಇಂದಿಗೂ ಇಲ್ಲಿ ದೊರೆಯುತ್ತಿವೆ. ಕಲ್ಲಿನಲ್ಲಿ ಮೂಡಿದ ಜಿಂಕೆಯ ಕಾಲು ಹಾಗೂ ರಾಮ ಲಕ್ಷ್ಮಣರ ಪಾದದ ಬೆರಳು ಮೊಣಕಾಲು ನಂತರ ರಾಮನು ಜಿಂಕೆಗೆ ಹೊಡೆದ ಬಾಣವು ನಮಗೆ ಕಾಣಸಿಗುತ್ತವೆ. ಈ ಬಾಣವು ಪ್ರತಿವರ್ಷ ಬೆಳೆಯುತ್ತದೆ ಎಂಬುದು ಅಲ್ಲಿಯ ಜನರ ಮಾತುಮತ್ತು ರಾಮ ಯಜ್ಞ ಮಾಡಿದ ಹೋಮ ಕುಂಡಗಳು ದೊರೆತಿವೆ. ಈ ಆಶ್ರಮವನ್ನು ಕೆಲವು ವರ್ಷಗಳ ಹಿಂದೆ ಮರುನಿರ್ಮಾಣ ಮಾಡುವ ಮೂಲಕ ರಾಮನ ದೇವಾಲಯವನ್ನಾಗಿ ನಿರ್ಮಿಸಲಾಗಿದೆ.

# ಅಕ್ಷಯ ಪಾತ್ರೆ



ಅಶ್ವಿನಿ ಎಂ. ಬೆಲ್ಲದ
ಬಿ.ಎ 6ನೇ ಸೆಮಿಸ್ಟರ್

ಅಕ್ಷಯ ಪಾತ್ರೆ ಎಂದ ಕೂಡಲೇ ಎಲ್ಲರಿಗೂ ನೆನಪಾಗುವುದು ಪ್ರಾಚೀನ ಕಾಲದಲ್ಲಿದ್ದ ಒಂದು ತಟ್ಟೆ.ಇದನ್ನು ಅದೃಷ್ಟದ ತಟ್ಟೆ ಎಂದೂ ಸಹ ಕರೆಯಲಾಗುತ್ತದೆ.ಆದರೆ ಇಲ್ಲಿ ಅಕ್ಷಯ ಪಾತ್ರೆ ಎಂದರೆ ಯೋಜನೆ ಎಂದು ಅಥವಾ ಒಂದು ಸಂಸ್ಥೆ ಎಂದೂ ತಿಳಿಯಬಹುದು.ಇದು ಒಂದು ಸರಕಾರಿ ಯೋಜನೆಯಾಗಿದೆ.ಇದು ರಾಜ್ಯ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಸಂಸ್ಥೆಯಾಗಿದೆ.ನಾವೆಲ್ಲರೂ ಅಕ್ಷಯ ಪಾತ್ರೆ ಎಂದರೆ ಒಂದು ಪಾತ್ರೆ ಎಂದು ತಿಳಿದುಕೊಳ್ಳುತ್ತೇವೆ. ಆದರೆ ಇದೊಂದು ಸರ್ಕಾರಿ ಶಾಲೆಯ ಮಕ್ಕಳಿಗೆ ನೀಡುವ ಮದ್ಯಾಹ್ನದ ಬಿಸಿಯೂಟವಾಗಿದೆ ಎಂದು ಹೇಳಬಹುದು.ಇದು ಇಂದಿಗೂ ಪ್ರಚಲಿತವಿದೆ.

ಅಕ್ಷಯ ಪಾತ್ರೆ ಎಂಬ ಒಂದು ಪರಿಕಲ್ಪನೆಯು ಹುಬ್ಬಳ್ಳಿ ಮತ್ತು ಧಾರವಾಡ ಹಾಗೂ ಹೈದ್ರಾಬಾದ ಕರ್ನಾಟಕ ಪ್ರದೇಶದ ಬಳ್ಳಾರಿ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕಂಪ್ಲಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇರುವ ಸರಕಾರಿ ಶಾಲೆಗಳ ಪ್ರತಿಯೊಂದು ಮಕ್ಕಳಿಗೂ ಮದ್ಯಾಹ್ನ ಬಿಸಿಯೂಟ ಒದಗಿಸಲಾಗುತ್ತದೆ.ನನಗೆ ತಿಳಿದ ಹಾಗೆ ಧಾರವಾಡ ಮತ್ತು ಹುಬ್ಬಳ್ಳಿಯ ಮಧ್ಯದಲ್ಲಿ ಒಂದು ಪ್ರತ್ಯೇಕವಾದ ಸ್ಥಳದಲ್ಲಿ ಕಂಡು ಬರುತ್ತದೆ.ಸ್ವಚ್ಛತಯಿಂದ ಕೂಡಿದ ಉತ್ತಮ ಸ್ಥಳದಲ್ಲಿ ಇದನ್ನು ನಿರ್ಮಿಸಲಾಗಿದೆ, ಶುದ್ಧ ಹಾಗೂ ಪೌಷ್ಟಿಕ ಆಹಾರವನ್ನು ಬಡ ವಿದ್ಯಾಥಿಗಳಿಗೆ ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.ಆದ್ದರಿಂದ ಇಲ್ಲಿ ಸ್ವಚ್ಛತೆಗೆ ಪ್ರಮುಖ ಸ್ಥಾನವನ್ನು ನೀಡಲಾಗಿದೆ.ಅದಕ್ಕಾಗಿಯೇ ಈ ಅಕ್ಷಯ ಪಾತ್ರೆ ಯೋಜನೆಯಲ್ಲಿ ಆಹಾರವನ್ನು ತಯಾರಿಸಲು ಹಾಗೂ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಡಲು ಒಂದೊಂದು ಪ್ರತ್ಯೇಕವಾದ ಕೊಠಡಿಗಳ ವ್ಯವಸ್ಥೆ ಕಂಡುಬರುತ್ತದೆ.ಅಕ್ಕಿ, ಬೇಳೆ, ತರಕಾರಿಗಳು ಹಾಗೂ ವಿವಿಧ ರೀತಿಯ ದವಸ ಧಾನ್ಯಗಳನ್ನು ಪ್ರತಿನಿತ್ಯವೂ ಸ್ವಚ್ಛಗೊಳಿಸಿ ಪ್ರತ್ಯೇಕಗೊಳಿಸಿ ಸಂಗ್ರಹಿಸಿಡಲಾಗುತ್ತದೆ.ಈ ಅಕ್ಷಯ ಪಾತ್ರೆ ಯೋಜನೆಯ ಆಹಾರ ತಯಾರಿಕೆಯಲ್ಲಿ ಹೊಸ ಹೊಸ ಮಾದರಿಯ ದೊಡ್ಡ ದೊಡ್ಡ ಕುಕ್ಕರ್, ಹಂಡೆ ಹಾಗೂ ದೊಡ್ಡ ದೊಡ್ಡ ಪಾತ್ರೆಗಳ ಬಳಕೆ ಮಾಡಲಾಗುತ್ತದೆ.ಪ್ರತಿನಿತ್ಯವೂ ಸಹ ಸಾವಿರಾರು ಬಡಕುಟುಂಬದ ಮಕ್ಕಳಿಗೆ ಸರಕಾರಿ ಶಾಲೆಗಳ ಮೂಲಕ ಮದ್ಯಾಹ್ನ ಬಿಸಿಯೂಟವನ್ನು ನೀಡಲಾಗುತ್ತದೆ.ಜಿಲ್ಲೆಯ ಪ್ರತಿಯೊಂದು ಸರಕಾರಿ ಶಾಲೆಯ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಮತ್ತು ರುಚಿಯಾದ ಆಹಾರವನ್ನು ಒದಗಿಸುವ ಉದ್ದೇಶದಿಂದ ಈ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ.ಸಾವಿರಾರು ಮಕ್ಕಳಿಗೆ ಸರಿಯಾದ ಸಮಯಕ್ಕೆ ಆಹಾರ ತಲುಪಿಸುವ ಉದ್ದೇಶದಿಂದ ಇಲ್ಲಿ ಸಮಯ ವ್ಯರ್ಥ ಮಾಡದೇ ಇರುವ ಉಪಕರಣಗಳನ್ನು ಬಳಸಿ ಕಡಿಮೆ ಸಮಯದಲ್ಲಿ ರುಚಿಕರ ಹಾಗು ಪೌಷ್ಟಿಕ ಆಹಾರ

ತಯಾರಿಸಲಾಗುತ್ತದೆ.ಮದ್ಯಾಹ್ನ 1–30ರ ಒಳಗಾಗಿ ಜಿಲ್ಲೆಯ ಪ್ರತಿಯೊಂದು ಶಾಲೆಗಳಿಗೂ ಬಿಸಿಯೂಟತಯಾರಿಸಿ ಅದನ್ನು ಅಚ್ಚುಕಟ್ಟಾಗಿ ತಲುಪಿಸುವ ಕಾರ್ಯ ಈ ಅಕ್ಷಯ ಪಾತ್ರ ಯೋಜನೆ ಮಾಡುತ್ತದೆ.ಈ ಸಂಸ್ಥೆಯ ವಾಹನಗಳ ಮೂಲಕ ಆಯಾ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ತಲುಪಿಸುತ್ತಾರೆ.ಆದರೆ ಈ ಆಕ್ಷಯ ಪಾತ್ರೆ ಯೋಜನೆಯಿಂದ ಯಾವ ಸಮಸ್ಯೆ ಇಲ್ಲಿಯವರೆಗೂ ಎದುರಾಗಿಲ್ಲ. ಆದ್ದರಿಂದ ಪ್ರತಿಯೊಂದು ಜಿಲ್ಲೆ ತಾಲ್ಲೂಕು ಮತ್ತು ಗ್ರಾಮಗಳು ಈ ರೀತಿಯ ಒಂದು ಹೊಸ ಹೊಸ ಮಾದರಿಯ ಹಾಗೂ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು.ಅಕ್ಷಯ ಪಾತ್ರೆ ಯೋಜನೆಯ ಮುಖ್ಯ ಉದ್ದೇಶ. ಬಡ ಮಕ್ಕಳಿಗೆ ಸರ್ಕಾರಿ ಶಾಲೆಯ ಮಕ್ಕಳಿಗೆ ರುಚಿಯಾದ ಪೌಷ್ಠಿಕ ಆಹಾರವನ್ನು ಒದಗಿಸುವುದಾಗಿದೆ ಎಂದು ಹೇಳಬಹುದು.

■■■■

## ನನ್ನ ರಚನೆಗಳು



**ಭಾಗ್ಯಶ್ರೀ ಹೆಚ್**
ಬಿ.ಎಸ್ಸಿ 6ನೇ ಸೆಮಿಸ್ಟರ್

ಈ ಗಂಭೀರ ನಾಯಕ
ಗಡಿ ಕಾಯುವ ರಕ್ಷಕ
ಅವನೇ ನಮ್ಮೆಲ್ಲರ ಸೇವಕ
ಇವನೇ ನಮ್ಮ ಹೆಮ್ಮೆಯ ಸೈನಿಕ

ಬಿಡಬೇಕು ಅಹಂಕಾರ
ಮಾಡಬೇಕು ಪರೋಪಕಾರ
ಕಲಿಯಬೇಕು ಒಳ್ಳೆಯ ಸಂಸ್ಕಾರ
ಆಗುವುದು ಜೀವನ ಝೇಂಕಾರ

ಆಗ ಇದ್ದೆ ಅಜ್ಞಾನಿ
ಕಲಿತ ಮೇಲೆ ಜ್ಞಾನಿ
ಜ್ಞಾನದ ಬೀಜದಿಂದ
ಆಗುವೆನು ಸುಜ್ಞಾನಿ

ಅಮ್ಮನ ತುತ್ತು
ಅಪ್ಪನ ಗತ್ತು
ಮರೆಯಬೇಡ ಯಾವತ್ತೂ
ಅದೇ ಜೀವನದ ಕಿಮ್ಮತ್ತು

ಅಮ್ಮನ ಮಡಿಲು
ಅಪ್ಪನ ಆರ್ಭಟದ ಸಿಡಿಲು
ಎರಡನ್ನೂ ಸ್ವೀಕರಿಸಿದಾಗ
ಆಗುವುದು ಜೀವನ ಏರಿಳಿತದ ಕಡಲು

ಅಮ್ಮನ ಮುದ್ದು ಮಗಳಾಗಿ
ಅಪ್ಪನ ಹೆಮ್ಮೆಯ ಮಗಳಾಗಿ
ಸಾಧನೆಯ ಹಾದಿಯಲ್ಲಿ ಒಳ್ಳೆಯ ಮಹಿಳೆಯಾಗಿ
ಧೀರ ಶೂರಳಾಗಿ ಬಾಳಬೇಕು ಹೆಣ್ಣುಮಗಳಾಗಿ

ಹೇಳಬೇಡ ನನಗಿದೆ ಬಡತನ
ತೊಲಗಿಸುವುದೇ ನಮ್ಮಯ ಜಾಣತನ
ಕೊನೆಗೆ ತಾನಾಗಿಯೇ
ಒಲಿದು ಬರುವುದು ಸಿರಿತನ

ನಡೆಸಬೇಡ ಪಿತೂರಿ
ಹಾಕಬೇಡ ಜೇಬಿಗೆ ಕತ್ತರಿ
ಎಲ್ಲರಿಗೂ ಆಗು ಬಣ್ಣದ ತುತ್ತೂರಿ
ಆಗ ನಿನ್ನ ಜೀವನಕೆ ನೀನೇ ರಾಯಭಾರಿ

■■■■

## ಆಸೆ



ವಿಜಯಲಕ್ಷ್ಮಿ ಎಸ್. ಕುಂಬಾರ
ಬಿ.ಎ. 6ನೇ ಸೆಮಿಸ್ಟರ್

ಚಿಟ್ಟೆಯಂತೆ ಹಾರುವಾಸೆ
ಸಿಲುಕಿಕೊಂಡು ನರಳುತಿರುವೆ
ಮನದ ಮೂಲೆಯಲಿ
ಹಲವು ಬೇಲಿಯಲಿ
ಎಂದು ನೆಲವೇನೇನೂ ಕಾಣೆ
ಬಯಕೆ ತೋಟದಲಿ
ಆದರೂನು ಕಾಯುತಿರುವೆ
ಭರವಸೆಯ ಬೆಳಕಲಿ

ಮನಸಿಗಿಲ್ಲ ಬೇಲಿ
ಮಿದುಳಿನಂತೆ ಅಳೆದು ತೂಗಿ
ಭೇದ ಮಾಡಲು
ಮನುಜರಾಗಿ ಬಾಳಿ
ಜಾತಿ ರೀತಿ ಭೇದವರಿತು
ಸುಖವ ಕಾಣಲು

ನೆನಪುಗಳ ಚಿಟಪಟ ಮಳೆಯಲಿ
ತೋಯ್ದು ಕುತಿರುವೆ ನಾನು
ನನ್ನ ಮನದ ಬಯಕೆ ತೀರಲು
ಎಂದು ಬರುವೆಯೋ ನೀನು
ನೀ ಬಂದ ಮರುನಿಮಿಷಕೆ
ಬದುಕಿಗೆ ಹೊಸರೂಪ
ಎಂದು ಕಾಣಸಿಗುವೆಯೋ
ನನ್ನದೆಯ ಪ್ರತಿರೂಪ

ಬಾನಲಿ ಮೋಡಗಳ ಅತಿಯಂತೆ
ನಿನ್ನೆದೆಯ ಬಾನಲಿ
ಅಲೆಯುತಿಹೆ ನಾನು
ಇದಕೇನು ಕಾರಣ ಹೇಳು ನೀನು
ನಿನ್ನೆದಯ ಗೂಡಲಿ
ಬೆಚ್ಚಗೆ ಒರಗಿಕೊಳ್ಳುವೆ ನಾನು
ಇದಕೇನು ಅರ್ಥ ಹೇಳು ನೀನು
ನಿನ್ನೊಡಲ ಸರೋವರದಲಿ
ತಟಸ್ಥನಾಗುವೆನು ನಾನು

■■■■

# ಕಲರ್ಸ ಕನ್ನಡ

ಸುಧಾ ಹೆಚ್.ಜಿ.
ಬಿ.ಕಾಮ್. 6ನೇ ಸೆಮಿಸ್ಟರ್

ಕುಲ ಎಂಬ ಕೂಸು ಹುಟ್ಟಿ
ವಧು ಎಂಬ ವರ ತಂದು
ಪುಟ್ಟಗೌರಿ ಎಂಬ ಕನ್ಯೆಗೆ
ಅಗ್ನಿಸಾಕ್ಷಿಯಾಗಿ ಮದುವೆ ಮಾಡಿ
ಲಕ್ಷ್ಮಿ ಬಾರಮ್ಮ ಎಂದು ಮನೆ ತುಂಬಿಸಿಕೊಂಡು
ವರುಷದಲ್ಲಿ ಹರುಷ ತಂದು
ಮಣಿ ಎಂಬ ಮಗಳು ಹುಟ್ಟಿ
ಪದ್ಮಾವತಿ ಎಂಬ ಅಮ್ಮನನ್ನು ಪೂಜಿಸಿ
ಸೀತಾವಲ್ಲಭ ಎಂಬ ಜೋಡಿಯಾಗಿ
ನೂರು ಕಾಲ ಚೆನ್ನಾಗಿರಿ ಎಂದು
ಶನಿದೇವರು ಆಶೀರ್ವದಿಸುವುದು
ನಮ್ಮ ಕಲರ್ಸ ಕನ್ನಡವಾಗಿದೆ

▪▪▪▪

ಗೀತಾಂಜಲಿ
ಬಿ.ಎ. 2ನೇ ಸೆಮಿಸ್ಟರ್

ಓ ನನ್ನ ಸಾಹಿತಿ..
ನೀ ಕಥೆ ಕವನಕ್ಕಾಗಿ ಕಾಯುತಿ
ಸಮಾಜದ ಒಳತಿಗಾಗಿ ನೀ ತಿರುಗುತಿ
ತಿರುಗಿ–ತಿರುಗಿ ಇದ್ದುದ್ದನ್ನೇ ಇದ್ದಾಂಗ ಬರಿತಿ
ಆಗ ನೋಡು ನಿನ್ನ ಪಜಿತಿ
ಆಗ ನಿನ್ನ ಮೇಲೆ ಯಾರು ಇಡುವುದಿಲ್ಲ ಪಿರುತಿ
ಆಗ ನೀ ಮನದಲ್ಲೆ ಕೊರಗತಿ
ಕೊರಗಿ–ಕೊರಗಿ ಒಮ್ಮೆ ಸಾಯಿತಿ
ಬಂದರೇನು ಸಿಗುವುದು ಆಗಲೇ ನೀ ಸತ್ತಿರತಿ
ಆಗ ನಿನಗೆ ಸಿಗುವುದು ಮುಕುತಿ
ಓ ನನ್ನ ಸಾಹಿತಿ..

ನಾನು ಬರೆದ ಕವಿತೆಯಲ್ಲಿ ನೀನಿನ್ನೂ ಭೇಟಿ ಆಗಿಲ್ಲ
ನೀನು ಬಂದ ಗಳಿಗೆಯಲಿ ನಿನಗಾರು ಸಾಟಿ ಇಲ್ಲ
ಕನಸಲ್ಲು ನಿನ್ನ ಬಿಟ್ಟು ನನಗಾರು ಬೇಕಿಲ್ಲ
ಕನಸಿನ ರಾಜ ನನ್ನ ಪ್ರೀತಿ ಎಂದೂ ಸುಳ್ಳಲ್ಲ

ಪ್ರೀತಿಯೊಂದು ಮಾಯೆ ಎಂದರು
ನನ್ನ ಪ್ರೀತಿ ಸಾಯದು
ನಾ ಮಾಯವಾದರೂ
ನಾ ನಿನ್ನ ಕಾಯುವೆ ಅದೇನೆ ಬಂದರೂ
ನಿನ್ನ ಪ್ರೀತಿಯೆಂದರೆ ನನ್ನ ದೇವರು

■■■■

# ಹೆಣ್ಣು

ಕೀರ್ತಿ ಪಿ. ಶಿರೋಳ
ಬಿ.ಎಸ್ಸಿ. 2ನೇ ಸೆಮಿಸ್ಟರ್

ನಿನ್ನ ಕತ್ತಲೆಯ ಬದುಕಿಗೆ
ಹೊಸ ಬೆಳಕು ತರುವವಳು ಹೆಣ್ಣು
ನಿನ್ನ ನೋವಿನ ಪ್ರತಿ ಕ್ಷಣಗಳಲ್ಲಿ
ಕಣ್ಣೀರ ಸುರಿಸುವವಳು ಹೆಣ್ಣು
ನಿನ್ನ ಪ್ರತಿ ಸುಖ ದುಃಖಗಳಲ್ಲಿ
ಭಾಗಿಯಾಗುವವಳು ಹೆಣ್ಣು
ನಿನ್ನ ಮೊಗವ ಕಂಡು ನಾಚಿ
ನೀರಾಗುವವಳು ಹೆಣ್ಣು
ಹೆಣ್ಣೇ ಈ ಜೀವಕ್ಕೆ ಆಧಾರ
ನಿಮಗೆ ಇಷ್ಟೆಲ್ಲಾ ಮಾಡುವವಳು ಹೆಣ್ಣು
ನಿಲ್ಲಿಸಿ ಈ ಹೆಣ್ಣು ಮಗುವಿನ ಭ್ರೂಣ ಹತ್ಯೆ
ಒಂದು ಜೀವಕ್ಕೆ ಜೀವ ನೀಡುವ ಈ ಹೆಣ್ಣು
ಭೂಮಿ ಮೇಲಿರುವ ಸೃಷ್ಟಿಕರ್ತೆ

■■■■

## ಅಕ್ಕನ ಪ್ರೀತಿ



ಪ್ರವೀಣ ಚಿತ್ರಗಾರ
ಬಿ.ಎಸ್ಸಿ. 6ನೇ ಸೆಮಿಸ್ಟರ್

ಅದೊಂದು ಅದೃಷ್ಟದ ಕೋಟೆ.ಅದು ಎಲ್ಲರಿಗೂ ದೊರೆಯುವಂತದ್ದಲ್ಲ. ಅದನ್ನು ಪಡೆಯಲು ಪೂರ್ವ ಜನ್ಮದ ಪುಣ್ಯವಿರಬೇಕು.ಅದೊಂದು ನಮ್ಮ ಜೀವನದುದ್ದಕ್ಕೂ ಮನರಂಜನೆಯನ್ನು, ತರ್ಲೆ ತಾಪತ್ರಯಗಳನ್ನು, ಕೋಳಿ ಜಗಳವನ್ನು ಒದಗಿಸುವ ಮಮತೆಯ ಭಾಂದವ್ಯ.ಅದುವೆ ಅಕ್ಕ ತಮ್ಮನ ಭಾಂದವ್ಯ.

ಕೆಲವೊಬ್ಬರಿಗೆ ಆ ದೇವರು ಅಕ್ಕನನ್ನು ಪಡೆಯುವ ಅದೃಷ್ಟವನ್ನು ಕೊಟ್ಟಿರುವುದಿಲ್ಲ. ಕೆಲವೊಮ್ಮೆ ನಾ ಕಂಡಂತೆ ಅಕ್ಕ ತಮ್ಮಂದಿರಿಗೆ ಅಥವಾ ತಮ್ಮ ಅಕ್ಕಂದಿರಿಗೆ ಕೊಡುವ ಕೀಟಲೆಗಳನ್ನು ಕಂಡು ನನಗೂ ಯಾಕೆ ಆ ಅದೃಷ್ಟವಿಲ್ಲವಲ್ಲ ಎಂದೆನಿಸುತ್ತದೆ.ಅದು ಎಲ್ಲರಲ್ಲೂ ಸಾಮಾನ್ಯ ಕೂಡಾ.ಅಕ್ಕ ತಮ್ಮಂದಿರು ಯಾವಾಗಲು ವಾದ–ವಿವಾದ, ತರ್ಲೆ ಮಾಡುವುದರಲ್ಲಿ ತೊಡಗಿರುತ್ತಾರೆ.ಆದರೆ ಅವರಿಬ್ಬರ ಮನದಲ್ಲಿ ಒಬ್ಬರಿಗೊಬ್ಬರ ಬಗ್ಗೆ ಪ್ರೀತಿ, ಕಾಳಜಿ, ಮಮತೆಯ ಬಗೆಗೆ ಯಾವತ್ತೂ ಕೊರತೆ ಸುಳಿವು ಸುಳಿಯುವುದಿಲ್ಲ.

ಅಕ್ಕ ಎನ್ನುವ ಜೀವವಿದ್ದರೆ ತಮ್ಮನಲ್ಲಿ ಯಾವತ್ತೂ ಒಂಟಿತನಕ್ಕೆ ಆಸ್ಪದವಿರುವುದಿಲ್ಲ. ತಮ್ಮನಿಗೆ ಸದಾ ಬೆಂಬಲ ನೀಡುವ,ಪ್ರೋತ್ಸಹಿಸುವ ಕೆಲವೊಮ್ಮೆ ತಮ್ಮನ ತಪ್ಪುಗಳಿಗೆ ಯಾರಾದರೂ ಅಡ್ಡಿಪಡಿಸುತ್ತಿದ್ದರೆ ಅದನ್ನು ತಡೆಯುವ ಅಥವಾ ಆ ತಪ್ಪನ್ನು ತನ್ನ ಮೇಲೆ ತಂದುಕೊಂಡು ತಮ್ಮನನ್ನು ಕಾಪಾಡುವ ಮಮತೆಯ ನಿಧಿ (ಅಕ್ಕ). ತಮ್ಮನಲ್ಲಿ ಏನೇ ಆಗಲಿ ಜೀವನದಲ್ಲಿ ಬೆಳಕನ್ನು ತೋರುವ ಭರವಸೆ/ನಂಬಿಕೆಯ ಇನ್ನೊಂದು ಸೃಷ್ಠಿಯೇಅಕ್ಕ ಎನ್ನುವ ಜೀವವು ಸದಾ ತಮ್ಮಂದಿರಿಗೆ ಬೆನ್ನೆಲೆಬು ಇದ್ದ ಹಾಗೆ. ತಮ್ಮನ ತರ್ಲೆಗಳನ್ನು ಸಹಿಸಿಕೊಳ್ಳುತ್ತಾ ತಪ್ಪುಗಳನ್ನು ತಿದ್ದುವ ಯಾವಾಗಲೂ ಸಹೃದಯಿಯಾಗಿರುವ ಒಂದೇ ಒಂದು ಜೀವವೆಂದರೆ ಅದುವೆ ಅಕ್ಕರೆಯ ಅಕ್ಕ.ಅಕ್ಕಳಾದವಳು ತಮ್ಮಂದಿರಿಗೆ ಸದಾಕಾಲ ಉತ್ತಮ ಮಾರ್ಗದರ್ಶಕಿಯಾಗಿ, ಪ್ರೀತಿ ತೋರುವ ತಂಗಿಯಾಗಿ, ಉತ್ತಮ ಸ್ನೇಹಿತೆಯಾಗಿ, ಮಮತೆ ತೋರುವಲ್ಲಿ ಎರಡನೆಯ ತಾಯಿಯಾಗಿರುತ್ತಾಳೆ.ಇಷ್ಟೆಲ್ಲಾ ಪಾತ್ರ ನಿರ್ವಹಿಸುವ ಹಾಗೆಯೇ ತಮ್ಮನಿಗೆ ಖುಷಿಯಾಗಿರುವ, ನಿನ್ನ ಸಮಸ್ಯೆಗಳ ಜೊತೆ ನಾನಿದ್ದೇನೆ ಎಂದು ಧೈರ್ಯ ತೋರುವ ಒಂದೇ ಒಂದು ಅದೃಷ್ಠದ ದೇವತೆಯೇ (ಅಕ್ಕ).

ಇಂತಹ ಅದೃಷ್ಟ ಎಲ್ಲರಿಗೂ ಸಿಗುವಂತಾಗಬೇಕು.ಅದಕ್ಕಾಗಿ ಭಾರತೀಯರಾದ ನಮ್ಮಲ್ಲಿ ಹೆಣ್ಣು ಮಗುವಿನ ಬಗೆಗಿನ ಕೀಳರಿಮೆಯ ಮನಸ್ಥಿತಿ ಬದಲಾಗಬೇಕು.ಪುರಾತನ ಭಾರತದ ಸಂಸ್ಕತಿಯಲ್ಲಿ ಹೆಣ್ಣಿಗೆ ಮಹತ್ತರವಾದ ಸ್ಥಾನವಿತ್ತು.ಆಗೆಲ್ಲ ಹೆಣ್ಣನ್ನು ದೇವಿ ಸ್ವರೂಪವೆನ್ನುತ್ತಿದ್ದರು.ಹಾಗೆಯೇ ಪೂಜ್ಯನೀಯ ಭಾವನೆಯಿಂದ

ಕಾಣುತ್ತಿದ್ದರು. ಆದರೆ ಇತ್ತೀಚಿನ ಈ ಆಧುನಿಕ ಯುಗದಲ್ಲಿ ಹೆಣ್ಣನ್ನು ತುಚ್ಚವಾಗಿ ಕಾಣುವ ಭಾವನೆ ವಿಜೃಂಭಿಸುತ್ತಿದೆ.ಇದು ನಾವೆಲ್ಲ ಅಸಹ್ಯಪಡುವ ವಿಷಯವಾಗಿದೆ.ಒಬ್ಬ ಪುರುಷನ ಜೀವನದಲ್ಲಿ ಒಬ್ಬ ಹೆಣ್ಣು ಮಗು ತಾಯಿಯಾಗಿ, ಮಡದಿಯಾಗಿ, ಮಗಳಾಗಿ, ತಂಗಿಯಾಗಿ ಹಾಗೆಯೇ ಅಕ್ಕನಾಗಿ ವಿವಿಧ ಭಾಂದವ್ಯವನ್ನು ಹಂಚಿಕೊಳ್ಳುತ್ತಾಳೆ.ಇಂತಹ ದೈವದತ್ತವಾಗಿ ಬಂದಿರುವ,ಬರುತ್ತಲೇ ಇರುವ ಈ ಅದೃಷ್ಟದ ಬಾಗಿಲನ್ನು ತಳ್ಳುವವರ ಸಂಖ್ಯೆ ಹೆಚ್ಚುತ್ತಲೆ ಇದೆ. ಹೇಗೇಂದರೆ ಆಧುನಿಕ ಕಾಲವಾದ ಇಂದಿನ ದಿನಗಳಲ್ಲಿ ಹೆಣ್ಣು ಭ್ರೂಣ ಹತ್ಯೆಯನ್ನುವುದು ಅತಿಯಾಗಿ ಕಂಡು ಕೇಳಿ ಬರುತ್ತದೆ.ಅದಕ್ಕೊಸ್ಕರ ಈ ನಿಟ್ಟಿನಲ್ಲಿ ನಾವೆಲ್ಲ ಭಾಗ್ಯೋದಯದ ಬಾಗಿಲನ್ನು ತೆರೆಯು ಶಕ್ತಿಯಿರುವ ಈ ಹೆಣ್ಣು ಅದೃಷ್ಟ ದೇವತೆಯ ಮೇಲೆ ಆಗುತ್ತಿರುವ ದಯಾ ರಹಿತ ಭ್ರೂಣ ಹತ್ಯೆಯನ್ನು ತಡೆದು, ಹೆಣ್ಣು ಭ್ರೂಣ ಹತ್ಯೆಯ ನಿರ್ಮೂಲನಾ ವಿಷಯದಲ್ಲಿ ಪಾಲುದಾರರಾಗಿ ನಾವೆಲ್ಲ ಇನ್ನಷ್ಟು ತೀವ್ರಗತಿಯಲ್ಲಿ ಇದರೊಂದಿಗೆ ಪಾಲ್ಗೊಂಡು ಜನರಲ್ಲಿ ಜಾಗೃತಿ ಮೂಡಿಸುವ ಮನೋದೈರ್ಯವಂತರಾಗಿ ಸುಸೂತ್ರವಾದ ಸಮಾಜವನ್ನು ನಿರ್ಮಿಸಿ ಅದರ ಅಡಿಯಲ್ಲಿ ಸುಖವಾಗಿ ನಿದ್ರಿಸುವ ನಿಷ್ಠಾವಂತರಾಗಿ ಬಾಳಬೇಕಾಗಿದೆ, ಬನ್ನಿ ಬಾಳೋಣ ಬದುಕನ್ನು ಕಟ್ಟೋಣ,ಕಟ್ಟಿಕೊಳ್ಳೋಣ.

■■■■

## ಪವಿತ್ರ ಮತ್ತು ವಿಚಿತ್ರ

ಗ್ಯಾನಪ್ಪ ಹೆಚ್. ಚೆಂಗುಂಟಿ
ಬಿ.ಎ. 6ನೇ ಸೆಮಿಸ್ಟರ್

ನ್ಯಾಯ ಪವಿತ್ರ
ತೀರ್ಪು ವಿಚಿತ್ರ

ಸಂಸ್ಕಾರ ಪವಿತ್ರ
ಬದುಕೋದು ವಿಚಿತ್ರ

ಧರ್ಮ ಪವಿತ್ರ
ಆಚರಣೆ ವಿಚಿತ್ರ

ಶಿಕ್ಷೆ ಪವಿತ್ರ
ಶಿಕ್ಷಿಸುವುದು ವಿಚಿತ್ರ

ನಗು ಪವಿತ್ರ
ನಗಿಸುವವರು ವಿಚಿತ್ರ

## ಇಲ್ಲದ ಮೇಲೆ

ಎಷ್ಟಿದ್ದರೇನು ಐಶ್ವರ್ಯ?
ಎಷ್ಟಿದ್ದರೇನು ನಂಬಿಕೆ?
ಎಷ್ಟಿದ್ದರೇನು ಅಂತಸ್ತು?
ನಮ್ರತೆಯೇ ಇಲ್ಲದ ಮೇಲೆ..

ಎಷ್ಟಿದ್ದರೇನು ಶಕ್ತಿ?
ಎಷ್ಟಿದ್ದರೇನು ಬುದ್ದಿ?
ಎಷ್ಟಿದ್ದರೇನು ಭಕ್ತಿ?
ಆಸಕ್ತಿ, ಛಲ ಇಲ್ಲದ ಮೇಲೆ..

ಎಷ್ಟಿದ್ದರೇನು ಪ್ರೀತಿ?
ಎಷ್ಟಿದ್ದರೇನು ನೆಮ್ಮದಿ?
ಎಷ್ಟಿದ್ದರೇನು ಸವಾಲುಗಳು?
ಬದುಕು ಅರ್ಥ ಇಲ್ಲದ ಮೇಲೆ..

▪▪▪▪

## ಇಳೆಯ ಸ್ವರೂಪ ನನ್ನ ತಾಯಿಯ ಆಂತರಿಕ ರೂಪ

ಭಾಗೀರಥಿ ಮಳಿಮಠ
ಬಿ.ಎ. 6ನೇ ಸೆಮಿಸ್ಟರ್

ಸುಮಾರು 28 ರ ಪ್ರಾಯದ ವನಿಜೆ ನನ್ನ ಈ ಕತೆಯ ನಾಯಕಿ ಗಿರಿಜೆ.ಗಿರಿಜೆ ಕಂಡ ಜೀವನವೇ ವಿಭಿನ್ನ.ಇವಳದು ದುಡ್ಡಿನ ಮೋಹವಿಲ್ಲದ ಜೀವನ. ಗಿರಿಜೆ ಎನ್ನುವ ವನಿತೆ ಜನ್ಮ ತಾಳಿದ್ದು ಒಂದು ಹಳ್ಳಿಯಲ್ಲಿ.ಬಡತನದ ಸಂಸಾರ, ಸಂಸಾರ ಮುಂದುವರೆಸಲು ತಮ್ಮೂರಿನಲ್ಲಿಯೇ ಬಾಲ್ಯದಲ್ಲೆ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡುತ್ತ ದುಡ್ಡಿನ ನೆರವಾಗುತ್ತಿದ್ದಳು ತನ್ನ ಸಂಸಾರಕ್ಕೆ ಬಹಳ ಚೂಟಿ ಈ ಹೆಣ್ಣು ಎಲ್ಲವನ್ನು ಮಾಡುವ, ಆಕಾಶಕ್ಕೆ ಏಣಿಯನ್ನ ಹಾಕುವ ಛಲ ಇವಳದು.ಈಕೆ ಇದ್ದ ಕಡೆ ನಗು ಸಂತೋಷ ಹರಡುತ್ತಿತ್ತು.ಎಲ್ಲರಿಗೂ ಪ್ರೀತಿ ಪಾತ್ರಗಳು ಈಕೆ.

ಗಿರಿಜೆ ನೋಡಲು ತೆಳ್ಳಗೆ ಎತ್ತರಕ್ಕೆ ಕಂದು ಬಣ್ಣದ ಚೆಲುವೆ ತನ್ನ ತಂದೆ ತಾಯಿಯರಿಗೆ ಸಹಾಯ ಮಾಡಲು ಬೇರೆ ಊರಿಗೆ, ಬೇರೆ ರಾಜ್ಯಕ್ಕೆ ಹೋಗಿ ತನ್ನ ವಯಸ್ಸಿಗೂ ಮೀರಿದ ಕೆಲಸವನ್ನು ಬಲು ಅಚ್ಚುಕಟ್ಟಾಗಿ ಎಲ್ಲರ ಪ್ರೀತಿಗೆ ಪಾತ್ರಳಾಗುವ ರೀತಿಯಲ್ಲಿ ಮಾಡುತ್ತಿದ್ದಳು.ಇವಳು ಎಲ್ಲಿರುತ್ತಾಳೋ ಅದೇ ಅವಳ ಊರು, ಇವಳ ಅಕ್ಕ –ಪಕ್ಕ ಇರುವವರೆ ಈಕೆಯ ಬಂಧು – ಮಿತ್ರರು. ಹೀಗೆ ಸಂಸಾರದ ಜವಾಬ್ದಾರಿಯನ್ನು ಇಳಿ ವಯಸ್ಸಿನಲ್ಲಿ ಹೊತ್ತುಕೊಂಡು ಹೆತ್ತ ತಂದೆ – ತಾಯಿಯರಿಗೆ ಬಡತನದ ಬೆವರೊರೆಸೊ,ಪ್ರೀತಿಯನ್ನ ಉಣಬಡಿಸೋ ತಾಯಿಯಾದಳು ಈ ತನುಜೆ.

ಹೀಗಿರುವಾಗ ವಯಸ್ಸಿಗೆ ಬಂದ ಹಾಗೆ ಅವಳಿಗೆ ವಿವಾಹ ಕೂಡಿಬರುತ್ತದೆ.ತಂದೆ–ತಾಯಿಯರ ಆಸೆಯಂತೆ ಅವರು ತೋರಿಸಿದ ವರನನ್ನು ವರೆಸಿದಳು. ಸುಮಾರು ಹದಿನೈದರ ವಯಸ್ಸಿನಲ್ಲಿ ಸದಿನ್ಯದರ ಇಳಿ ವಯಸ್ಸಿನಲ್ಲೆ ಕಾಣದ ಊರಿನ ಗೊತ್ತಿಲ್ಲದ ಮನೆಯಲ್ಲಿ ಸೇರನ್ನೊದ್ದು ಮನೆಯ ಸೇರಿದಳು ಈ ಗಿರಿಜೆ.

ಮನದಲ್ಲಿ ಸಾವಿರಾರು ಆಲೋಚನೆಗಳು ಕಣ್ಣಲ್ಲಿ ಹೇಳಲಾಗದ ಬಯಕೆಗಳು ಹಿತ ತರುತ್ತಿರುವವು ಸಂಸಾರದ ಕೆಲ ಘಟನೆಗಳು ಹೀಗೆ ಜಾರಿದವು ಕೆಲ ವರ್ಷಗಳು.ಈಗ ನಿಜ ಕಥೆಯು ಪ್ರಾರಂಭವಾಗುತ್ತಿದೆ.

ಹೀಗೆ ಗಿರಿಜೆ ಗಂಡನ ಮನೆಯನ್ನು ತುಳಿದ ದಿನದಿಂದ ಗಂಡನನ್ನೇ ಸರ್ವಸ್ವ ಎಂದುಕೊಂಡು ತನ್ನ ಮಕ್ಕಳು ತನ್ನ ಸಂಸಾರ ಎನ್ನುವುದನ್ನು ಬಹಳ ಕಲಿಸಿತ್ತು.ಅವಳು ಎಲ್ಲಾ ಕೆಲಸವನ್ನು ಬಹಳ ಸರಳವಾಗಿ ಬೇರೆಯವರಿಗೆ ಇಷ್ಟವಾಗುವ ರೀತಿಯಲ್ಲಿ ಮಾಡುವುದು ಅವಳ ವ್ಯಕ್ತಿತ್ವ.ಹೀಗೆ ತನ್ನ ತವರಲ್ಲಿ ತನ್ನೆಲ್ಲ ಸಂತೋಷವನ್ನ ಹೇಳುತ್ತ ತವರನ್ನ ನಗಿಸುತ್ತಿದ್ದಳು ತನ್ನ ಮಾತಿನಿಂದ ತವರಲ್ಲಿ ನಗು ತುಂಬಿರುತ್ತಿತ್ತು.ಏಕೆಂದರೆ

ತನ್ನ ಮಗಳು ಮೆಟ್ಟಿದ ಮನೆಯಲ್ಲಿ ಚೆನ್ನಾಗಿ ಬಾಳುತ್ತಿದ್ದಾಳೆ ಎಲ್ಲಾರು ಇವಳ ಬಗ್ಗೆ ಒಳ್ಳೆಯ ಮಾತುಗಳನ್ನಾಡುತ್ತಿದ್ದಾಳೆ ಎನ್ನುವ ಕಾರಣಕ್ಕೆ.

ಆದರೆ ಒಂದು ದಿನ ತವರಿಂದ ತನ್ನ ತಂದೆ ಆಕೆಯ ಗಂಡನ ಮನೆಗೆ ಹೋದರು. ಹೋಗಿ ನೋಡಿದರೆ ತಂದೆಯ ಕಣ್ಣಲ್ಲಿ ನೀರು ಬರುತ್ತಿವೆ ಕಾರಣ ಮಗಳು ಇರುವ ಪರಿಸ್ಥಿತಿ ಅಂಥದ್ದು. ಮಕ್ಕಳು ತಟ್ಟೆಯಲ್ಲಿ ಅನ್ನ ಖಾರದ ಪುಡಿಯನ್ನು ಉಣ್ಣುತ್ತಿದ್ದರೆ ಇತ್ತ ಅವರ ಮಗಳು ಗಿರಿಜೆ ಹೊಲದಲ್ಲಿ ದುಡಿದು ಬೆವರೊರೆಸಿಕೊಳ್ಳುತ್ತ ಬರುತ್ತಿರುವ ಸನ್ನಿವೇಶವದು. ಕಷ್ಟವನ್ನು ಅನುಭವಿಸುತ್ತಿದ್ದರು ತನ್ನ ತವರಿಗೆ ಈ ವಿಷಯ ತಿಳಿಯದ ಹಾಗೆ ಕಾಪಾಡಿಕೊಳ್ಳುತ್ತ ಬಂದಿದ್ದಳು.ಆದರೆ ಆ ದಿನ ತನ್ನೆಲ್ಲ ಕಷ್ಟಗಳು ತಂದೆಯ ಮುಂದೆ ಕಾಣಿಸಿದಾಗ ಆಕೆಯ ಕಣ್ಣುಗಳು ಕಂಬನಿಯನ್ನು ಸುರಿಸಿದವು.

ಏಕೆ ಒಮ್ಮೆಗೆ ಗಿರಿಜೆಗೆ ಈ ಕಷ್ಟ ಎನ್ನುತ್ತಿದ್ದೀರಾ? ಗಿರಿಜೆಯ ಸಾಂಸಾರಿಕ ಬಾಳು ಬರಿ ನಾಲ್ಕೈದು ವರ್ಷಗಳ ಮಟ್ಟಿಗೆ ಚೆನ್ನಾಗಿಯೇ ಇತ್ತು,ಕಾಲ ಕ್ರಮೇಣ ಕುಡಿತದ ಆಮೀಷಕ್ಕೆ ಬಲಿಯಾಗಿ ತನ್ನ ಆಂತರಿಕ ಆರೋಗ್ಯವನ್ನು ಕೆಡಸಿಕೊಳ್ಳದೆ ತನ್ನ ಆಂತರಿಕ ಮನಸ್ಸಿನ ಸ್ಥಿತಿಯನ್ನು ಕೆಡಸಿಕೊಂಡಿದ್ದ ಆಕೆಯ ಪತಿರಾಯ. ಕುಡಿದ ಅಮಲಿನಲ್ಲಿ ಗಿರಿಜೆಯ ಮೈಮೇಲೆಲ್ಲಾ ತನ್ನ ಪೌರುಷದ ಬರೆಯನ್ನು ಹಾಕಿದ್ದನು.ಬರೀ ಕುಡಿದು ಬಂದು ಹೆಂಡತಿಯನ್ನು ಬಡೆಯುವುದಷ್ಟೆ ಆಗಿದ್ದರೆ ಗಿರಿಜೆ ಚಿಂತಿಸುತ್ತಿರಲಿಲ್ಲ, ಏಕೆಂದರೆ ಅವಳಿಗೆ ದುಡಿಯುವ ಎಲ್ಲಾ ಸಾಮರ್ಥ್ಯವು ಇದ್ದವು.ಆದರೆ ಸಂಸಾರವನ್ನ ನಡೆಸಲು ಕೆಲಸಕ್ಕೆ ಹೋದರೆ ಗಂಡನ ಅನುಮಾನದ ಹದ್ದಿನ ಕಣ್ಣು ಆಕೆಯ ಮೇಲೆಯೇ.ಮನೆಯಿಂದ ಹೊರಗೆ ಹೋದರೆ ಸಾಕು ಸೀರೆಯ ಸೆರಗನ್ನ ನನ್ನ ಕೈಗಿಟ್ಟು ಹೋಗು ಎನ್ನುವಷ್ಟು ಕ್ರೂರಿ ಗಂಡ.

ಇಷ್ಟೆಲ್ಲಾ ಕಷ್ಟಗಳನ್ನ ತಾನೇ ನುಂಗಿಕೊಂಡಿದ್ದಳು ಆದರೆ ಆ ದಿನ ತನ್ನ ತಂದೆಗೆ ತನ್ನ ಕಷ್ಟ ಗೊತ್ತಾಯಿತಲ್ಲಾ ಎಂದು ಕಣ್ಣೆರಿಟ್ಟಳು ಆ ಗಿರಿಜೆ.ಮಗಳ ಸ್ಥಿತಿಯನ್ನರಿತ ತಂದೆ ತನ್ನ ಮಗಳ ಕಷ್ಟ ನೋಡಲಾಗದೆ ತವರು ಮನೆಗೆ ತನ್ನ ಮಗಳನ್ನು ಕರೆತಂದನು.ಆದರೂ ಬೆನ್ನು ಬಿಡದ ಬೇತಾಳದ ಹಾಗೆ ಅವಳ ಮೈಯಲ್ಲಿರುವ ರಕ್ತವನ್ನೀರಲು ಸಿದ್ಧವಾಗಿದ್ದನು ಆ ಕ್ರೂರಿ ಗಂಡ.ಆಕೆಯನ್ನು ತವರಲ್ಲಿ ಖುಷಿಯಿಂದ ಇರಲು ಬಿಡದೆ ಹೇಗಾದರೂ ಅವಳನ್ನು ತನ್ನೂರಿಗೆ ಕರೆಸಿಕೊಳ್ಳಬೇಕೆಂದುಕೊಂಡು ತನ್ನ ಮೂವರು ಮಕ್ಕಳಲ್ಲಿ ಇಬ್ಬರು ಮಕ್ಕಳನ್ನು ತನ್ನಲ್ಲಿ ಇಟ್ಟುಕೊಂಡಿದ್ದನು.ಮಕ್ಕಳ ಮೇಲಿನ ಪ್ರೀತಿಯಿಂದ ಗಿರಿಜೆ ತನ್ನ ಗಂಡನ ಮನೆಗೆ ಅನಿವಾರ್ಯವೆಂಬಂತೆ ತೆರೆಳಿದಳು. ಗಂಡ ಖಾಯಿಲೆಯಿಂದ ಬಳಲುತ್ತಿರುವುದನ್ನು ಕಂಡ ಆಕೆ  ತವರಿಂದ ತಂದಿದ್ದ ದುಡ್ಡನ್ನು ಆತನ್ನ ಆರೈಕೆಗೇ ಮೀಸಲಿಟ್ಟಳು.

ಇದರಿಂದ ಮನಸೋತು ಆಕೆ ದುಡಿಯಲು ಬೇರೆಯ ಊರಿಗೆ ತನ್ನ ಗಂಡನೊಂದಿಗೆ ಹೋದಳು.ತಾನು

ದುಡಿದು ಹಾಕುವೆ ನೀನು ಮನೆಯಲ್ಲಿ ಆರಾಮಾಗಿರು ಎಂದರು ಸಹ ನೀನು ಹೊರಗಡೆ ಹೋಗಿ ಮೋಜು ಮಾಡಿ ಬಾ ನಾನು ಮನೆಯಲ್ಲಿ ಸುಮ್ಮನೆ ಕೈ ಕಟ್ಟಿಕೊಂಡು ಕುಳಿತಿರುವೆ ಎಂದು ಆಕೆಯ ವ್ಯಕ್ತಿತ್ವಕ್ಕೆ ಆಕೆಯ ಹೆಣ್ತನದ ಬಗ್ಗೆ ಅನುಮಾನಿಸುವ ಅವನ ಮನೆ,ಊರು ಬಿಟ್ಟು ಹೋದರೂ ಬದಲಾಗಲೇ ಇಲ್ಲಾ.

ಗೊತ್ತಿಲ್ಲದ ಊರಿನಲ್ಲಿ ಗೊತ್ತಿರದ ಜನರ ನಡುವೆ ತನ್ನ ಸಂಸಾರವನ್ನು ನಡೆಸುತ್ತಿರುವಳು ಧೈರ್ಯಶಾಲಿ ಗಿರಿಜೆ.ಆಕೆಯ ವ್ಯಕ್ತಿತ್ವವನ್ನು ಕಂಡ ಆಕೆಯ ದೂರದ ಸಂಬಂಧಿಕರು ಆಕೆಯನ್ನ ತಂದೆ ತಾಯಿಯರ ಸ್ಥಾನದಲ್ಲಿದ್ದು ಮಗಳ ಹಾಗೆ ಆಕೆಯನ್ನ ನೋಡುತ್ತಿದ್ದಾರೆ.ಆದರೆ ಅವರಿಗೆ ಭಾರವಾಗದೇ ಪ್ರತಿ ದಿನ ಮುಂಜಾನೆಯಿಂದ ಸಂಜೆಯವರೆಗೂ ಕೆಲಸಕ್ಕೆ ಹೋಗುತ್ತಾಳೆ.

ಬೆಳಗ್ಗೆಯಿಂದ ಸಾಯಂಕಾಲದವರೆಗೂ ದುಡಿದು ಹಣ್ಣಾದ ದೇಹ ರಾತ್ರಿ ವಿಶ್ರಮಿಸಲು ತಂಗಿದರೆ, ಗಂಡನ ಆರ್ಭಟ ಪ್ರಾರಂಭವಾಗುವುದು.ಗಂಡನು ಇಷ್ಟೇಲ್ಲ ತನ್ನ ಆಕ್ರೋಶದಿಂದ ಮೆರೆದರು ತಾನು ಮೈ ದಣಿಸಿ ದುಡಿದು ಕೂಡಿಟ್ಟ ಹಣದಲ್ಲಿ ತನ್ನ ಗಂಡ ಮಾಡಿದ ಸಾಲವನ್ನು ತೀರಿಸುತ್ತಾಳೆ. ಹಾಗೆಯೇ ತನ್ನ ಮೂರು ಮಕ್ಕಳ ಭವಿಷ್ಯವನ್ನು ರೂಪಿಸಲು ಹಗಲು – ರಾತ್ರಿಯೆನ್ನದೆ ದುಡಿಯುತ್ತಲೇ ಕಾಲ ನೂಕುತ್ತಾಳೆ.

ಅವಳ ಮನಸಲ್ಲಿ ಇರುವುದೊಂದೆ ನನ್ನ ಕಷ್ಟ ನನ್ನಲ್ಲಿಯೇ ಇರಲಿ, ನನ್ನವರೆಲ್ಲ ನಗು – ನಗುತ್ತಾ ಇರಲಿ.

ನನ್ನ ಮಕ್ಕಳು ನಾಲ್ಕು ಮಂದಿಯ ಹಾಗೆ ಸಮಾಜಕ್ಕೆ ಬೇಕಾಗುವ–ಒಳ್ಳೆಯದನ್ನು ಮಾಡುವ

ಗಣ್ಯರಾಗಲಿ ಇವರೆಲ್ಲಾ ನಗುವಿನ ಪ್ರತಿ ಕ್ಷಣದಲ್ಲಿ ನನ್ನ ಹೆಸರು ಅಮರವಾಗಿರಲಿ ಎಂಬುದೊಂದೆ ಅವಳ ಬದುಕಿನ ಬಹು ದೊಡ್ಡ ಆಸೆಯಾಗಿತ್ತು.

ಇಷ್ಟೆಲ್ಲಾ ಕಥೆಯನ್ನು ಓದಿದ ನಮಗೆಲ್ಲಾ ಈ ಗಿರಿಜೆ ಧರೆಯ ಸ್ವರೂಪಿ ಎಂದು.ಈ ಮೇಲೆ ಹೇಳಿದ ಎಲ್ಲಾ ಘಟನೆಯ ಕಥೆಯು ನನ್ನ ಹೆಮ್ಮೆಯ ನನ್ನ ಚಿಕ್ಕಮ್ಮಳ ನಿಜವಾದ ಕಥೆಯಿದು.ಅವಳೇ ನಾ ಕಂಡ ದೇವರ ರೂಪ. ಅವಳ ಆತ್ಮವಿಶ್ವಾಸ ಹೇಗಿರಬಹುದೆಂದು ನೀವೇ ಯೋಚಿಸಿ ಸ್ವಲ್ಪ, ಇವಳೇ ಹೆಣ್ತನದ ದಿವ್ಯ ಸ್ವರೂಪಿಣಿ.

▪▪▪▪

## ಸಹನೆ ಕಟ್ಟೆ

ರೇಖಾ ಸ. ಹಳ್ಳಿಕೇರಿ
ಬಿ.ಎಸ್ಸಿ 2ನೇ ಸೆಮಿಸ್ಟರ್

ಉಳ್ಳವರು ನೀವು
ಉಳುವವರು ನಾವು
ಬಿಸಿಲು ಮಳೆ ಚಳಿಗಾಳಿಯಲಿ
ಮೈಮುರಿದು ದುಡಿಯುವವರು ನಾವು
ನಮ್ಮ ಸುಲಿದು ಸಮಾಧಿ ಮಾಡಿ
ಸುಖದ ಸೌಧವ ಕಟ್ಟಿಕೊಂಡು
ಸುಪ್ಪತಿಗೆಯಲಿ ಉರುಳಾಡುವವರು ನೀವು

ಬೆಂಗಾಡ ಬದುಕಿನಲಿ
ಕಲ್ಲು ಮುಳ್ಳುಗಳ ತುಳಿದು
ಬವಣೆ ಪಟ್ಟು
ನಿಮ್ಮ ಪಾದಗಳ ರಕ್ಷಣೆಗೆ
ಮೆಟ್ಟು ಹೊಲಿದಿದ್ದೇವೆ

ಕಾಂಚಾಣದಮಲಿನಲಿ
ನಮ್ಮನ್ನು ತುಳಿದು ಮೇಲಕ್ಕೆ ಬಂದಿದ್ದರೂ
ಹಲ್ಲು ಕಚ್ಚಿ ಸಹಿಸಿಕೊಂಡಿದ್ದೇವೆ
ಮುಂದೆಂದಾದರು ಒಳ್ಳೆಯ ದಿನಗಳು
ಬಂದಾವು ಎಂದು
ನಮ್ಮ ಗುಡಿಸಲುಗಳಲ್ಲಿ
ದೀಪ ಹಚ್ಚಲು ಎಣ್ಣೆ ಇಲ್ಲದಿದ್ದರೂ
ನಿಮ್ಮ ಮಹಲುಗಳಲಿ ನಮ್ಮ
ನೆತ್ತರ ದೀಪಗಳ ಉರಿಸಿದ್ದೇವೆ

ಸಹನೆ ಕಟ್ಟೆಯನ್ನೊಡೆದು
ಸಿಡಿದು ಗುಡುಗಾಗುವ ಮುನ್ನ
ಅರಿತು ಬನ್ನಿ ಬರೆವ ಬನ್ನಿ
ಸಮಾನತೆಯ ಸರಿದಾರಿಗೆ

▪▪▪▪

ಕವನಗಳು



ಬಸವರಾಜಯ್ಯ ವಿ ಸಾಲಿಮಠ
ಬಿ.ಎ 6 ನೇ ಸೆಮಿಸ್ಟರ್

ಜೀವನವೆನ್ನುವುದು ದಾರಿ ಇದ್ದಂತೆ
ಕಷ್ಟಗಳೆನ್ನುವುದು ರಸ್ತೆಯಲ್ಲಿ ಬರುವ
ಹಂಪ್ಸಗಳು ಇದ್ದಂತೆ
ಸಂಬಂಧಿಕರುವೆನ್ನುವರು ಎದುರಿಗೆ ಬರುವ
ಗಾಡಿಗಳು ಇದ್ದಂತೆ
ಅವರು ನಕ್ಕರೆ ಗಾಡಿಗೆ ಬ್ರೇಕ್ ಹಾಕಿದಂತೆ
ಅವರು ಅತ್ತರೆ ಗಾಲಿ ಒಳಗಿನ ಗಾಳಿ ಹೋದಂತೆ
ಸಾಧನೆ ಮಾಡಿದರೆ ಸನ್ಮಾನ
ಇಲ್ಲದಿದ್ದರೆ ಸ್ಮಶಾನ

←- - - - - - - - - - - - - - →

ಸೂರ್ಯ ಹಗಲು ಬಂದು ಸಂಜೆ ಹೋಗುತ್ತಾನೆ
ಚಂದ್ರ ರಾತ್ರಿ ಬಂದು ಹಗಲು ಹೋಗುತ್ತಾನೆ
ಇಂದಿನ ಮುಖ್ಯಮಂತ್ರಿ
ನಾಳೆಯ ಮಾಜಿ ಮುಖ್ಯಮಂತ್ರಿ
ಈಗಿನ ನಮ್ಮ ನಗುವಿನ ಫೋಟೊ
ನಾಳೆಯ ಅಳುವಿನ ಫೋಟೋ.

←- - - - - - - - - - - - - - →

ಮಕ್ಕಳು ತಂದೆ ತಾಯಿಗೆ ಕೊಡಬೇಕು ರಕ್ಷಣೆ
ವಿದ್ಯಾರ್ಥಿಗಳು ಗುರುಗಳಿಗೆ ಕೊಡಬೇಕು ಗುರುದಕ್ಷಿಣೆ
ಅಳಿಯ ಮಾವನಿಗೆ ಕೊಡಬೇಕು ವಧುದಕ್ಷಿಣೆ
ಇವುಗಳನ್ನು ನೀ ಕಲಿತರೆ ಆಗುವೆ ಜೀವನದಲ್ಲಿ ಸುಧಾರಣೆ
ಇದರಿಂದ ಮುಂದೆ ಸಾಗುವುದು
ಸಮಾಜ ಸುವ್ಯವಸ್ಥೆಯ ಸ್ವಯಂರಕ್ಷಣೆ

ಕಾಲುಮುರಿಯಿತು ಎನಗೊಂದು ದಿನ
ತೋರಿಸಿದೆ ನಾ ವೈದ್ಯರಿಗೆ ಮರುದಿನ
ಆಗ ಅವರು ಹೇಳಿದರು ನೀ ತೆಗೆದುಕೋ
ವಿಶ್ರಾಂತಿ ಎಂಟು ದಿನ
ಮುಗಿಯಿತು ಅಲ್ಲಿಗೆ ಪರೀಕ್ಷೆ ಕಟ್ಟುವ ದಿನ
ಆ ನಂತರ ಮನೆಯವರಿಂದ ಕೇಳಿ ಬಂದಿತು
ಹೇ ದನ ದನ

←- - - - - - - - - - - - - - →

ಕಾಣದ ಲೋಕದಲ್ಲಿ ಕಣ್ಣುಗಳನ್ನು ತೆರೆಸಿದ ನೀನು
ಕಲಿಯುವ ಕಲಿಯುಗದಲ್ಲಿ ಕನಸನು ಕಾಣದ ನಾನು
ಆಕಾಶದಲ್ಲಿ ನಕ್ಷತ್ರ ಹುಡುಕಿದಂತೆ
ನನ್ನಲ್ಲಿ ನನ್ನನು ಹುಡುಕಿದೆ
ಆವಾಗ ಗೊತ್ತಾಯಿತು
ನಾವಿಬ್ಬರೂ ಒಂದೇ ಜಾತಿಯ ಸಜಾತಿಯ
ಅಕ್ಷರವೆಂದು

←- - - - - - - - - - - - - - →

ಜನರು ನಮ್ಮನ್ನು ಚಿತ್ತದಿಂದ
ಚಿತ್ರಿಸುವ ಚಿತ್ರವಾಗಬೇಕು
ಹೊರತು
ಚಂಚಲದಿಂದ ಚದುರುವ
ಕ್ಷಣಗಳು ಅಗಬಾರದು

■■■■

## ಕೊಪ್ಪಳದ ಗವಿಮಠ



ಶಾಂತಾ
ಬಿ.ಎ. 6ನೇ ಸೆಮಿಸ್ಟರ್

ಕೊಪ್ಪಳದ ಗವಿಮಠವು ಶ್ರೀ ಪೂಜ್ಯಪಾದರಾದ ಶ್ರೀ ಗವಿಸಿದ್ದೇಶ್ವರ ಮಹಾ ಸ್ವಾಮೀಜಿಗಳಿಂದ ಪ್ರಸಿದ್ಧಿ ಹೊಂದಿದ್ದು ಪ್ರತಿ ವರ್ಷದ ಜನವರಿ ಅಥವಾ ಫೆಬ್ರವರಿ ತಿಂಗಳಿನಲ್ಲಿ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವವು ಅದ್ಭುತವಾಗಿ ನಡೆಯುತ್ತದೆ.

ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವವು ದಕ್ಷಿಣ ಭಾರತದ ಕುಂಭಮೇಳ ಎಂದೇ ಪ್ರಸಿದ್ಧಿ ಪಡೆದಿದ್ದು ಈ ಜಾತ್ರಾ ಮಹೋತ್ಸವದಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತಾದಿಗಳು ಪಾಲ್ಗೊಳ್ಳುತ್ತಾರೆ.15 ದಿನಗಳ ಕಾಲ ಸ್ವಯಂ ಪ್ರೇರಿತರಾಗಿ ಭಕ್ತರು ದಾಸೋಹದಲ್ಲಿ ಪಾಲ್ಗೊಳ್ಳುತ್ತಾರೆ ಹಾಗೂ ವಿವಿಧ ಖಾದ್ಯಗಳನ್ನು ಭಕ್ತರಿಗೆ ಪ್ರಸಾದದ ರೂಪದಲ್ಲಿ ನೀಡಲಾಗುತ್ತದೆ.

ಗವಿಮಠದ ಪರಪಂರೆಯಲ್ಲಿ ಶ್ರೀ ಗವಿಸಿದ್ಧೇಶ್ವರರು ಗುರು ಪರಂಪರೆಯಲ್ಲಿ ಹನ್ನೊಂದನೆಯವರಾಗಿದ್ದು, ಪರಮ ಪೂಜ್ಯ ಸ್ವಾಮಿಗಳು 1816ರ ಶ್ರೀ ಮುಖ ಸಂವತ್ಸರದ ಶುದ್ಧ ಬಿದಿಗೆಯಂದು ಪ್ರಾಣವನ್ನು ಬ್ರಹ್ಮಸ್ಥಾನಕ್ಕೇರಿಸಿ ಸಜೀವ ಸಮಾಧಿಯಾದರು.ಅಂದಿನಿಂದ ಜಾತ್ರಾ ಮಹೋತ್ಸವ ನಡೆಯುತ್ತದೆ. ಅಮೋಘವರ್ಷ ನೃಪತುಂಗನು ಕೊಪ್ಪಳ ನಗರವನ್ನು 'ವಿದಿತ ಮಹಾಕೊಪಣ ಛಲ' ಎಂದೂ ಕೊಪ್ಪಳ ನಗರವನ್ನು ಬಣ್ಣಿಸಿದ್ದಾನೆ.

■■■■

## ಕವನಗಳು



ಜ್ಯೋತಿ ನಾಯಕ್
ಬಿ.ಎ 6 ನೇ ಸೆಮಿಸ್ಟರ್

ಬದುಕೆಂಬುದು ಮಹಾಸಾಗರ
ಹೋರಾಟವೆಂಬುದು ಅದರ ಸ್ವರ
ಬಾಳಲಿ ಆಗದಿರು ಅಸುರ
ಆಗ ಆಗುವುದು ಬಾಳು ಸುರ ಸುಂದರ

ಮುಂಜಾನೆ ಉದಯಿಸುವ ರವಿ ನೀನಾದರೆ
ನೀನ ಉದಯ ಕಂಡು ಹಾಡುವ ಕೋಗಿಲೆ ನಾನು
ಮುಂಜಾನೆ ಅರಳುವ ಕುಸುಮ ನೀನಾದರೆ
ಅದರಿಂದ ಬರುವ ಘಮ ನಾನಾಗುವೆ
ಮುಂಜಾನೆ ಮೂಡುವ ಇಬ್ಬನಿ ನಿನಾದರೆ
ಅದಕ್ಕೆ ಆಸರೆ ನಾನಾಗುವೆ
ಏನಾಗದಿದ್ದರೂ ನಾ ನಿನ್ನ ಸ್ನೇಹಿತೆಯಾಗುವೆ

■■■■

## ಗಣ್ಯರ ನುಡಿ

ಶಾಂತಾ ಜಿ.
ಬಿ.ಎ 6 ನೇ ಸೆಮಿಸ್ಟರ್

1) ದಡ್ಡನ ಜೊತೆಯಲ್ಲಿ ಚರ್ಚಿಸುವುದು ಕುರುಡನ ಮುಂದೆ ದೀಪ ಹಿಡಿದಂತೆ – ಡಿ.ಗ್ಯಾಸ್ಟನ್

2) ತಮ್ಮನ್ನು ತಿದ್ದಿಕೊಂಡವರು ಲೋಕವನ್ನು ತಿದ್ದಲು ಯೋಗ್ಯರಾಗಿರುತ್ತಾರೆ – ಸ್ವಾಮಿ ವಿವೇಕಾನಂದ

3) ಹೆತ್ತ ಮಗ ಕೈ ಬಿಟ್ಟರೂ ಬಿಟ್ಟಾನು ಆದರೆ ಕಲಿತ ವಿದ್ಯೆ ಎಂದಿಗೂ ಕೈ ಬಿಡದು – ಥಾಮಸ್ ಹಕ್ಸಲೀ

4) ಕಾಯಕವೇ ಕೈಲಾಸ – ಬಸವಣ್ಣ

5) ವ್ಯಕ್ತಿಗೆ ಬೆಲೆ ಬರುವುದು ರೂಪದಿಂದಲ್ಲ ಕಾರ್ಯದಿಂದ – ಗಯಟೆ

6) ನಿನ್ನ ಸಿಟ್ಟು ನಿನಗೆ ವೈರಿಗಳನ್ನು ಮಾತ್ರ ಸಂಪಾದಿಸಿ ಕೊಡಬಲ್ಲದು – ಮಹಾತ್ಮ ಗಾಂಧೀಜಿ

7) ನಗು ಮುಖದ ಸ್ವಭಾವವು ಧೀರ್ಘಾಯುಷ್ಯದ ಒಂದು ಸರ್ವೋತ್ತಮ ಸಾಧನವದು– ಟೆಕನ್

8) ಜ್ಞಾನದಂತಹ ಸಂಪತ್ತಿಲ್ಲ, ಅಜ್ಞಾನದಂತಹ ಬಡತನವಿಲ್ಲ – ಬುದ್ಧ

9) ಕೆಟ್ಟವರ ಸಹವಾಸದ ಬದಲಿಗೆ ಒಂಟಿಯಾಗಿರುವುದು ಲೇಸು – ಜಾರ್ಜ ವಾಷಿಂಗ್ಟನ್

10) ಕೆಲಸವನ್ನು ಗೌರವಿಸಿ ಅದುವೇ ಸುಂದರ ಜೀವನಕ್ಕೆ ಅಡಿಪಾಯ – ಮಹಾತ್ಮ ಗಾಂಧೀಜಿ.

■■■■

## ಕವನಗಳು



ಧನುಜಾ
ಬಿ ಎಸ್ಸಿ 4 ಸೆಮ್

ಜೀವನ ಒಂದು ನಿರೀಕ್ಷೆಯ ಮೆರೆಗಿನ ಅನಿರೀಕ್ಷಿತ ಬದುಕು
ಗಮನದ ಜನನ ತಿಳಿಯದ ನಿರ್ಗಮನ
ಹೆಸರಿನ ಆಯಸ್ಸಿಗೆ ಮೋಹ ಆಸ್ತಿಗಳಿಕೆಯ ದಾಹ
ಸ್ನೇಹಿತರ ಋಣ ಸಂಗಾತಿಯ ಮನ
ಸುಖ – ದುಃಖದ ಸಮ್ಮಿಲನ
ನ್ಯಾಯ – ಅನ್ಯಾಯದ ಅಸಮತೋಲನ
ಕೊನೆಗೆ ಉಳಿವು – ಅಳಿವುಗಳ ನಡುವೆ ಕದನ

ಭ್ರೂಣಾವಸ್ಥೆಯಿಂದ ಜೊತೆಗೆ ಇರುವ ಜೀವ ತಾಯಿ
ಮಗುವಿಗೆ ಮೊದಲು ಕಾಣುವ ಮುಗ್ಧತೆ ತಾಯಿ
ಜೀವ ನೀಡಲು ಜೀವವನ್ನೇ ಪಣವಾಗಿಡುವ ಜೀವ ತಾಯಿ
ಮಕ್ಕಳ ಸಂತೋಷಕ್ಕಾಗಿ ಮಿಡಿಯುವ ಮನ ತಾಯಿ
ಜೀವನ ಪಾಠ ಕಲಿಸುವ ಗುರು ತಾಯಿ
ಎಂದೂ ಮರೆಯಲಾಗದ ಸ್ನೇಹ ತಾಯಿ
ಸರಿಸಾಟಿ ಅರ್ಥ ಸಿಗದ ಪದವೇ ತಾಯಿ

ಮಾನವನ ಜನನದ ನಂತರ ಜಾತಿಯ ಜನನವಾಯಿತು,
ಆದರೆ ಮಾನವನಕ್ಕಂತ ಎತ್ತರ ಬೆಳವಣಿಗೆ ಆಗಿದೆ,
ಮಾನವರ ನಡುವೆ ಜಾತಿ ಎಂಬ ಕಲಹಕ್ಕೆ ಹೊಣೆಯಾಗಿದೆ,
ಜಾತಿಯ ಜನನದ ನಂತರ ಮಾನವನ ಜನನ ಎಂದು ನಂಬಿಸಿದೆ,
ಈಗಲಾದರೂ ಮಾನವನ ಜಾತಿಯ ಮೇಲಿನ ಮೋಹವನ್ನು ತೊರೆಯತಿಂದು ಬಯಸೋಣ
ಈಗಲಾದರೂ ಒಟ್ಟಿಗೆ ಹೇಳೋಣ ಎಲ್ಲರ ರಕ್ಷಕ ಒಬ್ಬನೇ ಎಂದು.

## ರೊಕೋಕೊ ಕಲೆ

ಪ್ರಿಯಾಂಕ
ಬಿ.ಎಸ್ಸಿ 4ನೇ ಸೆಮ್

ಕ್ರಿ.ಶ 18 ನೇ ಶತಮಾನದಲ್ಲಿ ಹುಟ್ಟಿ ಬೆಳೆದ ಮತ್ತೊಂದು ಕಲಾಶೈಲಿ ರೊಕೋಕೊ,ಸ್ವಲ್ಪವೂ ಓರಣವಿಲ್ಲದ, ಸಂಪ್ರದಾಯಿಕವಾದ ಅತ್ಯಲಂಕರಣ ಪ್ರಧಾನವುಳ್ಳ ರೊಕೋಕೊ ಶೈಲಿಯೂ,ಮದ ರಾಜವೈಭವ ಸದೃಶ್ಯಕಲೆಯಾದ ಬಾರೊಕ್ ಬದಲಾವಣೆಯಾಗಿ, ಸಮಾಜದ ಶ್ರೀಮಂತ ವರ್ಗ ಮತ್ತು ಪ್ರೋತ್ಸಾಹ ಪಡೆದ ಮಧ್ಯಮ ವರ್ಗದವರ ಕಲೆ ಎಂದೂ ಕರೆಸಿಕೊಂಡಿತ್ತು.

ಬಾರೊಕ್ ಕಲೆಯ ಶ್ರೇಷ್ಠ ವಿನ್ಯಾಸಕಾರನಾದ ಕ್ರಿಸ್ಟೋಫರ್ಟಸ್ ವಿನ್ಯಾಸ ರಚನೆಯನ್ನು ಸೆಂಟ್ ಪಾಲ್ ಕ್ಯಾಥೆಡ್ರಲ್ ಗುಮ್ಮಟ(ಲಂಡನ್)ದಲ್ಲಿ ಕಾಣಬಹುದು.ರೊಕೋಕೊ ಕಲೆಯು ಮುಖ್ಯವಾಗಿ ಸೌಂದರ್ಯಾನ್ವಿತ ಗೃಹ ಮತ್ತು ಗೃಹೋಪಕರಣಗಳ ರಚನೆಯ ನಿರ್ಮಾಣಗಳಿಗೆ ಮೀಸಲಾದಂತೆ ಕಂಡುಬರುತ್ತದೆ. ವೆರ್ಸಲ್ಸ ರಾಜಭವನ 14 ನೇ ಲೂಯಿಯ ಈ ವಾಸ್ತುವಿನಲ್ಲಿ ನೋಡಬಹುದು.

ಕ್ಲಾಸಿಸಿಮ್ ಮತ್ತು ಬಾರೊಕ್ ಶೈಲಿಗಳನ್ನು ಹಿಂದೆ ತಳ್ಳಿ ತನ್ನದೇ ಆದ ಮತ್ತೊಂದು ಹೊಸತನದ ಅಭಿವ್ಯಂಜಕ ಶೈಲಿಗೆ ರೋಮ್ಯಾಂಟಿಕ್ ಮೂವ್‌ಮೆಂಟ್‌ನ ಕಾರ್ಲಸ್ಟಿಟ್ಜನ್ ವರ್ಣ ಚಿತ್ರದ ರಚನೆಯು “ಎ ವಿಸಿಟ್ ಟು ಸಾವೆರಿನ್” ಎಂಬಲ್ಲಿ ಸಂಗ್ರಹಿಸಿದೆ.ಗಂಭೀರವೆನಿಸುವ ವೈಭವ, ಆಡಂಬರಗಳ ಸೂಚಕವಾದ ಸ್ವರ್ಣ ಮತ್ತು ಕಾಪ್ಯತಾಮ್ರವರ್ಣ ಮತ್ತು ನೇರಳೆ, ಗುಲಾಬಿ, ನೆರೆಹಸಿರು ಬಣ್ಣಗಳ ಬಳಕೆಗೆ ಪ್ರಾಧಾನ್ಯ ದೊರೆಯಿತು.

ಜಿನ್ ಪ್ರಾಗೋನಾರ್ಡ ಪ್ರಾಂಕೋಯಿಸ್ ಬುಷರ್ ವರ್ಣ ಚಿತ್ರ ಕಲೆ, ಇನಾಜ್ ಗುಂಥರ್ (ಶಿಲ್ಪಕಲೆ) ಮತ್ತು ಗೇಬ್ರಿಯಲ್ ಭೋಪ್ರಾಂ (ವಾಸ್ತು ಕಲೆ) ಇವರು ರೊಕೋಕೊ ಕಲೆಯ ನಿಷ್ಣಾತರು ಎಂದು ಹೇಳಬಹುದು. ಪುನರುಜ್ಜೀವನ ಕಾಲದ ಕಲೆ, ಇಂಪ್ರಸ್‌ನಿಜಮ್‌ಕಲ ಇವುಗಳ ಮಧ್ಯದಲ್ಲಿ ಅತ್ಯಂತ ಆಕರ್ಷಕ ಚಲನಾತ್ಮಕ ಕಲೆ ಎಂದರೆ “ರೊಕೋಕೊ ಕಲೆ”

18 ನೇಯ ಶತಮಾನದಲ್ಲಿ ರೊಕೋಕೊ ಶೈಲಿಯ ಕಲಾತ್ಮಕ ವಸ್ತುಗಳು ನಿರ್ಮಾಣಗೊಂಡವು.ಪ್ರಾಚೀನ ಹಾಗೂ ಸಾಂಪ್ರದಾಯಿಕ ಕಲೆಗಳ ಸ್ವರೂಪವೇ “ರೊಕೋಕೊ ಕಲೆ” ಎಂದೆನ್ನಬಹುದು.ಫ್ರಾನ್ಸ, ಜರ್ಮನಿ, ಇಂಗ್ಲೆಂಡ್ ಇತ್ಯಾದಿ ರಾಷ್ಟ್ರಗಳಲ್ಲಿ ಈ ಶೈಲಿಯು ಹೆಚ್ಚು ಪ್ರಚಲಿತಗೊಂಡಿತ್ತು.ರೊಕೋಕೊ ಕಲೆಯು ಖಾಸಗಿ ಕಟ್ಟಡಗಳ ಒಳಾಂಗಣ ಅಲಂಕಾರದಲ್ಲಿ ರಚಿಸಿದ್ದನ್ನು ಕಾಣಬಹುದು. ಸಂಯೋಜನೆಯ ಚಿತ್ರ ಹಾಗೂ ಕಲ್ಪನೆಯ ಚಿತ್ರ ಇವುಗಳು ರೊಕೋಕೊ ಕಲೆಯಲ್ಲಿ ಹೆಚ್ಚು ಕಂಡುಬರುವವು.ಯಡ್‌ಮಂಡ್ ಮತ್ತು ಜೂಲ್ಸ ಡಿ

ಗೊಂದಕೋರ್ಟ ಇವರು ಈ ಶೈಲಿಯ ಸುಪ್ರಸಿದ್ಧ ಕಲಾವಿದರಾಗಿದ್ದರು.ಅದಲ್ಲದೆ ಇವರು ಒಂದೇ ಮನೆತನದವರು.ವಾಟಯೋ ಕಲಾವಿದನು ದೇವಲೋಕದ ದೃಶ್ಯಗಳನ್ನು ಈ ಶೈಲಿಯಲ್ಲಿ ರಚಿಸಿದ್ದಾನೆ. ಇದು ನೊಂದ ಸಮಾಜದ ಪ್ರತಿಬಿಂಬಿಸುವ ಕಲೆಯಾಗಿದೆ. ಜರ್ಮನ್ , ಇಂಗ್ಲೆಂಡ್ ಇತ್ಯಾದಿ ದೇಶಗಳಲ್ಲಿ ಪಿಂಗಾಣಿ ಮೂರ್ತಿಗಳನ್ನು ಈ ಶೈಲಿಯಲ್ಲಿ ರಚಿಸಲಾಯಿತು. ರೊಕೋಕೊ ಕಲೆಯಲ್ಲಿ ಕೌಶಲ್ಯತೆಯ ಗುಣಕ್ಕಿಂತ ಭಾವನಾತ್ಮಕ ಕಲಾಕೃತಿಗಳು ಹೆಚ್ಚು ಕಂಡು ಬರುವವು. ವಾಟಯೋ, ಟಾಪೋಲೋ ಇವರು ರೊಕೋಕೊ ಕಲೆಯ ಪ್ರಮುಖ ಕಲಾವಿದರಾಗಿದ್ದಾರೆ.

ಕ್ರಿ.ಶ 1745–50 ರಲ್ಲಿ 'ಅಂತೋನಿ ಮತ್ತು ಕ್ಲಿಯೋಪಾತ್ರ' ಎಂಬ ತೈಲಚಿತ್ರಗಳನ್ನು ಟಾಯ್ ಪೋಲೊ ಕಲಾವಿದನು ರಚಿಸಿದ್ದಾನೆ. ಕೆಂಪು ಬಟ್ಟೆ ಧರಿಸಿದ ಅಂತೋನಿ ಹಾಗೂ ಬಿಳೀ ಬಟ್ಟೆ ಧರಿಸಿದ ಕ್ಲೀಯೋಪಾತ್ರ ಇವರ ಆಕೃತಿಗಳು ಅತ್ಯಂತ ಸೊಗಸಾಗಿ ಜನರ ಗುಂಪಿನ ಮಧ್ಯಭಾಗದಲ್ಲಿ ರಚಿಸಲ್ಪಟ್ಟಿದೆ.ಈ ತೈಲ ಚಿತ್ರವು ನ್ಯಾಶನಲ್ ಗ್ಯಾಲರಿ ಎಡನ್‌ಬರ್ಗ ಎಂಬಲ್ಲಿ ಸಂಗ್ರಹಿಸಲ್ಪಟ್ಟಿದೆ.

■■■■

# ಸರ್ವಜ್ಞ



ಭರತರಾಜ
ಬಿ.ಕಾಮ್. 4ನೇ ಸೆಮ್

ನಡುಗನ್ನಡ ಸಾಹಿತ್ಯದ ತ್ರಿಪದಿ ರಚಿತ ವಚನಕಾರರಾದ ಸರ್ವಜ್ಞ 16 ನೇ ಶತಮಾನದವರೆಂಬ ಪ್ರತೀತಿ ಇದೆ.ಸರ್ವಜ್ಞನ ತಂದೆ ಮಲ್ಲರಸ ಅಥವಾ ಬಸವರಸ. ತಾಯಿ ಮಲ್ಲಮ್ಮ ಬ್ರಾಹ್ಮಣ ಕುಲದವನಾಗಿದ್ದರು. ಇವರ ಊರು ಮಾಸೂರು, ಸರ್ವಜ್ಞನ ಹುಟ್ಟೂರು ಅಂಬಲೂರು. ಇವೆರಡೂ ಈಗಿನ ಹಾವೇರಿ ಜಿಲ್ಲೆಯ ಹಿರೇಕೆರೂರುದಲ್ಲಿವೆ. ಈ ದಂಪತಿಗಳಿಗೆ ಬಹಳ ವರ್ಷಗಳಿಂದ ಮಕ್ಕಳಾಗಿರಲಿಲ್ಲ ತುಂಬಾ ದೈವಭಕ್ತರಾಗಿದ್ದ ದಂಪತಿಗಳು ದಿನಾಲೂ ದೇವರಲ್ಲಿ ಸಂತಾನ ಭಾಗ್ಯಕ್ಕಾಗಿ ಪ್ರಾರ್ಥಿಸುತ್ತಿದ್ದರು.ಆ ವಿಷಯವನ್ನು ಕೇಳಿದ ಒಬ್ಬ ವ್ಯಕ್ತಿ ಅವರಿಗೆ ಕಾಶಿಗೆ ಹೋಗಿ ವಿಶ್ವನಾಥನನ್ನು ಪೂಜಿಸಿದರೆ ನಿಮಗೆ ಸಂತಾನ ಭಾಗ್ಯ ಪ್ರಾಪ್ತವಾಗುತ್ತದೆ ಎಂದು ಹೇಳಿದನು.

ಆವ್ಯಕ್ತಿ ಹೇಳಿದ ಪ್ರಕಾರ ಬಸವರಸನು ಕಾಶಿ ವಿಶ್ವನಾಥನ ದರ್ಶನ ಪಡೆಯಲು ಹೋದಾಗ ವಿಶ್ವನಾಥ ಆತನಿಗೆ ದರ್ಶನಕೊಟ್ಟು ಆತನಿಗೆ ಅನ್ನದ ಉಂಡೆಯನ್ನು ಕೊಟ್ಟು ಇದನ್ನು ಸೇವಿಸು ನಿನಗೆ ಒಂದು ಗಂಡು ಮಗುವಾಗುತ್ತದೆ.ಅವನು ಲೋಕಕ್ಕೆ ಪ್ರಸಿದ್ಧಿಯನ್ನು ಪಡೆಯುತ್ತಾನೆ ಎಂದು ಹೇಳಿ ಅದೃಶ್ಯನಾದನು.ಆಗ ಮರಳಿ ಮನೆಗೆ ಬರುವಾಗ ಅಂಬಲೂರು ಎಂಬ ಗ್ರಾಮವನ್ನು ಸೇರಿದಾಗ ತುಂಬಾ ಕತ್ತಲೆಯಾಗಿತ್ತು.

ಅಂತಹ ಸಂದರ್ಭದಲ್ಲಿ ಒಂದು ಮನೆಯ ಬಾಗಿಲನ್ನು ತಟ್ಟಿದನು.ಅಂಬಲೂರು ಗ್ರಾಮದಲ್ಲಿ ಮಳೆಯಾಗುತ್ತಿತ್ತು.ಆಗ ಮನೆಯ ಒಡೆಯ ಬಂದು ಬಾಗಿಲು ತೆಗೆದನು.ಅದು ಕುಂಬಾರ ಮತ್ತು ಅವನ ಮಗಳು "ಮಾಳಿ' ಅಲ್ಲಿ ಉಳಿದುಕೊಳ್ಳಲು ಅನುಮತಿಯನ್ನು ಪಡೆದುಕೊಂಡು ಕಾಶಿಗೆ ಹೋಗಿದ್ದು, ಕಾಶಿ ವಿಶ್ವನಾಥನ ಪ್ರಸಾದವನ್ನು ಪಡೆದ ವಿಷಯವನ್ನು ಮಾಳಿಗೆ ಹೇಳಿದನು.ನಂತರ ಮಾಳಿ ಅವನಿಗೆ ಊಟ ಬಡಿಸಲು ಅಣಿಯಾದಳು.ಸ್ವಲ್ಪ ಪ್ರಸಾದವನ್ನು ಆಕೆಗೆ ಕೊಟ್ಟು ತಾನು ತಿಂದನು.ಊಟ ಮಾಡುವಾಗ ಬಸವರಸ ಮಾಳಿಯ ಆಕರ್ಷಕ ರೂಪಕ್ಕೆ ಸೋತು ಹೋದನು ಇತ್ತ ಮಾಳಿಗೂ ಬಸವರಸನ ಮೇಲೆ ಅನುರಾಗ ಹುಟ್ಟಿತು.ನಂತರ ಇಬ್ಬರೂ ಪ್ರೇಮಪಾಶದಲ್ಲಿ ಬಿದ್ದರು. ಬಸವರಸ ಕುಂಬಾರನ ಮನೆಯಲ್ಲಿ 3–4 ದಿನ ಇದ್ದು ತನ್ನ ಊರಿಗೆ ಹೋದನು ಇತ್ತ ಮಾಳಿ ಗರ್ಭಿಣಿಯಾದಳು, ಬಸವರಸ ಮಾಳಿಯ ಪ್ರೀತಿಯ ಕುರುಹಾಗಿ ನವಮಾಸದ ನಂತರ ಮಾಳಿ ಸುಂದರವಾದ ಗಂಡು ಮಗುವಿಗೆ ಜನ್ಮ ನೀಡಿದಳು.ಅದು ಶಿವನ ಕರುಣೆಯಿಂದ ಜನಿಸಿದ ಮಗು ಎಂದು ನಂಬಲಾಯಿತು.

"ಸರ್ವಜ್ಞನೆಂಬುವವನು ಗರ್ವದಿಂದಾದವನೆ ?

ಸರ್ವರಲ್ಲಿ ಒಂದೊಂದು ನುಡಿ ಕಲಿತು

ವಿದ್ಯೆದ ಮಹಾ ಪರ್ವತವೆ ಆದ ಸರ್ವಜ್ಞ"

"ಸರ್ವಜ್ಞ" ನೆಂಬ ಹೆಸರು ಈ ಕವಿಯ ಹುಟ್ಟು ಹೆಸರು ಆಗಿರಲಿಲ್ಲವೆಂಬುದನ್ನೂ ಈ ವಚನ ಸೂಚಿಸುವಂತಾಗಿದೆ. ಇದು ಸತ್ಯ ಸಂಗತಿಯೇ, ಮನೆಯನ್ನು ಬಿಡುವವರೆಗೆ ಇದ್ದಿರಬಹುದಾದ ಹುಟ್ಟು ಹೆಸರನ್ನು ಸರ್ವಜ್ಞ ಆಗಲೇ ತ್ಯಜಿಸಿರಬೇಕು.ಇದು ಹೌದೇ ಏಕೆಂದರೆ ಅನೈತಿಕ ಸಂಪರ್ಕದ ಫಲವಾಗಿ ಹುಟ್ಟಿದ ಆ ಶಿಶುವಿನ ಹೆಸರಿನ ಮೇಲೆ ಸಮಾಜ ತಿರಸ್ಕಾರದ ಕೆಸರನ್ನು ಸಾಕಷ್ಟು ಎರಚಿರಬೇಕು.ಅದ್ದರಿಂದ ಅವಮಾನಿತನಾಗಿದ್ದ ಆತ ಬೆಳೆದು, 'ವಿದ್ಯೆಯ ಪರ್ವತ' ಆದ. ಬಳಿಕ ಅವನ ಪ್ರತಿಭೆಗೆ ಬೆರಗಾದ ಜನ ಇವನನ್ನು ಮೆಚ್ಚುಗೆಯಿಂದ ಗೌರವದಿಂದ 'ಸರ್ವಜ್ಞ ಎಂದು ಕರೆದಿದ್ದಾರೆ

ದೇಶ,ಕಾಲಗಳನ್ನು ಕುರಿತು ಸಂಗ್ರಹವಾಗಿ ಹೇಳುವುದಾದರೆ ಅವನ ಜನ್ಮಕ್ಕೆ ಕಾರಣವಾದ ಬಸವರಸನ ಊರು ಮಾಸನೂರು ತಾಯಿಯ ಊರು ಅಂಬಲೂರು ಎಂದೂ ಹೇಳಲಾಗಿರುವುದರಿಂದ ಇವನು ಧಾರವಾಡ ಜಿಲ್ಲೆಯವನು ಆಗುತ್ತಾನೆಯೇ, ಇವನ ಕಾಲವನ್ನು ಕುರಿತಂತೆ ಸರಿಯಾದ ಖಚಿತವಾದ ಆಧಾರಗಳು ಇದುವರೆಗೂ ದೊರಕಿಲ್ಲ.

"ಸತ್ತು ಹುಟ್ಟುವರೆಂಬ ಮಿಥ್ಯದ ನುಡಿಯೇಕೆ

ಬಿತ್ತಿದರೆ ಬೀಜ ಬೆಳೆವಂತೆ ವೃಕ್ಷತಾ

ಸತ್ತು ಹುಟ್ಟುವುದೆ ಸರ್ವಜ್ಞ"

ಇಲ್ಲಿ ಸರ್ವಜ್ಞನು ಲೋಕದಲ್ಲಿ ಕೆಲವರು ನಂಬಿರುವ ಸುಳ್ಳು ಸಂಗತಿಯನ್ನು ಕುರಿತು ಹೇಳಿದ್ದಾನೆ, ಮನುಷ್ಯನು ಸತ್ತ ಮೇಲೆ ನಾನಾ ರೂಪಗಳಿಂದ ಮತ್ತೆ ಹುಟ್ಟಿ ಈ ಭೂಮಿಯ ಮೇಲೆ ಬರುತ್ತಾನೆಂದು ಕೆಲವರ ನಂಬಿಕೆಯಾಗಿದೆ.ಇದನ್ನು ಸರ್ವಜ್ಞ ಸುಳ್ಳೆಂದು ಸಾರಿ ಹೇಳುತ್ತಾನೆ. ಇದು ಸರಿಯೇ ಯಾವುದಾದರೊಂದು ಗಿಡವು ಹಳೆಯದಾಗಿ ಬಿದ್ದ ಮೇಲೆ ಮತ್ತೆ ಹುಟ್ಟಲಾರದು.ಅದರಂತೆ ಮನುಷ್ಯನ ಶರೀರವೆಂಬ ವೃಕ್ಷವು ಹಳೆಯದಾಗಿ ಬಿದ್ದ ಮೇಲೆ ಮತ್ತೆ ಹುಟ್ಟುವುದೆಂಬುದು ಸುಳ್ಳು ಮಾತು ಎನ್ನುತ್ತಾನೆ. ಇದು ಸತ್ಯ ಸಂಗತಿಯು ಆಗಿದೆ.

■■■■

## *LIVE LIFE*

Nandita N.I.
B.Sc (CBZ), 2nd Semester

Life is crazy
And totally unpredictable
It's going to push you Over,
Kick you while your're down,
And hit when you try to get backup.
Not everything can beat you,
Things are going to change you,
But you get to choose which ones
You let change you.
Listen to your heart,
Follow your dreams,
And let no one tell you what you're capable of.
Push the limits,
Bend the rules,
And enjoy every minutes of it,
Laugh at everything,
Live for as long as you can love all.
But trust none,
Believe in yourself,
And never lose faith in others.
Settle for nothing but only the best,
And give 110% in everything you do.
Take risks,
Live on the edge,
Yet stay safe,
And cherish every moment of it.
Life is a gift,
Appreciate all the rewards,
And jump on every opportunity.

Not everyone's going to love you,
But who needs them anyway?
Challenge everything,
But give into the little things in life,
After all, that is what makes you.
Forget the unnecessary,
But remember everything,
Bring it with you everywhere you go,
Learn something new,
and appreciate Criticism.
Hate nothing,
But dislike what you wat
Never forget where you came from,
And always remember where you are going.
Live life to its fullest,
And have a reason for everything,
Even if it's totally insane,
Find your purpose in life,
And live it!

■■■■

## *SUCCESS*

The road to success is not straight
There is a curve called Failure,
A loop called confusion,
Speed bumps called Friends,
Red lights called enemies and
Caution lights called family.
But if you have a spare called determination,
An engine called perseverance,
Insurance called Faith, and
A driver called Jesus,
You will make it to a place called Success!

■■■■

## *EAGLE AND STORM*

By the author

Ben Kane


Saroja R.Rp

B.Sc (CBZ), 2nd Semester




Here is a small story of Eagle which is applicable for the human life. when a storm is approaching long before it knows that when will it break.

The Eagle will fly to some high spot and wait for the winds to came. when the storm hits, it sets its wings so that the wind will pick it up and lift it above the storm. when the storm is below the eagle is above. The Eagle does not Escape the storm. It simply uses the storm to lift it higher. It rises on the winds that bring the storm.

When the storms of life comes upon us live the Eagle We can rise above them and ride the winds of the storm bring sickness, tragedy, Failure and disappointment into our lives.

Try Opinion : As the Eagle overcomes the storm and uses the storm for it's high spot flying as the same the difficulties, problems, failures, disappointments what evercomes to us we should be ready to face every and each problem of life so that problems are the part of life and challenges in life are the approaching us to make us strong. so egale is the inspiration to all the creatures and "It is not the burdens of life which weigh, us down, but it is how we handle them that counts".

■■■■

## *INSPIRATIONAL POEM*



Tabassum
B.Sc (CBZ), 2nd Semester

If you can look at the
sunset and smile. Then
you still leave hope

If you can find
Pleasure in the
movement of a
butterfly. Than you
still have hope.

If you can find beauty
in the colours if a
Small flower. Then you
still hoave hope.

If you can see the
good in other people.
than you still have hope.

If the Sight of a rainbow
still makes you stop and
stare in wonder, then
you still have hope.

If the rain breaking
on a roof top can still
bull you to sleep, then
you still have hope.

If you meet new people
with a trace of excitement
and optimism, then you
still have hope.

If the soft fur of a favored
pet still feels pleasant
under your fingertips,
then you still have hope.

If the smile of a child
can still warm your
heart, then you still
have hope.

## *PRE HISTORY OF KOPPAL*



B.Sc (CBZ), 2nd Semester

Koppal is a town in the koppal district in the indian state of karnataka. It is surrounded on three sides by hills and was an important town in the history of karnataka. and also known as 'Kopananagar'. It cantains historical locations such as koppal fort. gavimath (a religious shrine) and the male mallappa temple koppal is known as jaina kashi meaning the most scared place for jains, so named because there were more than too basadis (also called bastis) Jain Prarthana Mandirs. Koppal District was cavred out of raichur District, located in the northern pout of karnataka state, on 1st April, 1998.

Location in Karnataka

Country : India

Region : Hydrabad Karnataka

District : Koppal District

Area

Total : 28.78 Km2 (11.11 sq. mi)

Elevation : 529m (1.736ft.)

Population as per 2011

Total : 70698

■■■■

Density : 1,951.36/km2

Languages :

Official : Kannada

Time Zone : UTC +5:30 (IST)

Pincode : 583231

Telephone Code : 08539

Vehicle Registration : KA - 37

Website : www.koppalcity.gov.in

Transport : Koppal has a railway station which is located north west from the city centre. The town also has an airport located 4 km west of the city center. the airport can be located her 15021' 34.2"N, 76013'09.5"E

Koppal as district has been recently constituted on 15th august 1997. Earlier it was a part of raichur district for that reason the study about koppal district. Researcher has to go through the history of Raichur District and Gazetteer to Raichur.

The koppal district is situated in the north eastern part of the Karnataka state, falls within the northern plains region,the chief characteistics of which are large expanses of treeless pains soil with a bare hilllock here or baulder there and some lower belts following the main rever. It lies on the bank of river Tungabadra.

The general slope of the district in from the north west towards the southeast. It's average height above the mean sea level being

1,311 feet four districts surround it namely Bagalkot to the North, Bellary to the south, Gadag to the east and Raichur District to the western part.

early in christian era the district appears to have been part of the kingdom of the shatawahas the vakatkas who reigned during the 3rd & 4th centruries A.D. They seemed to have held sway over Koppal for sometime after that it appears to have been included in the kadamba dominion.

The next dynasty of importance which ruled over this region was that of the chalukyas of Badami, According to an inscription from 'Aihole'.

After under Krishnadevaraya Doab area gained great eminence in the historic battle of Raichur of 1520 AD. Krishnadevaraya Recaptured it.

However after the fall of Vijayanagara Dynasty in 1565 AD. The taluk of Koppal and Yelburga were Jahagirs of Sir salajung and together constituted a separate jahagir District but 1949 it came under the Raichur district by the abolition of the jahagirs in hyderbad state.

freedom struggle in koppal District.

After sepoy mutiny in 1857, like all over india, in the region also the spirit of nationalism and political awakening made people fight against the despostic rule of britishers. after the establishment of Indian national congress in 1885. 1922 Shri R.B. Desai established the national school by name Vidhyananda Gurukul at with the assistance of

ramaswamy. this he lped in arausing a spirit of nationalism among the people.

After independence when Nizam of hyderabad denied to join inidan union & started torturing rebelled hindu people by the help of Razakars. No military action was taken against Nizam's despotism by Nehru & sadar Patel and this region was included in Indian union in 1948 on 17th sep. and came to known as hydrabad karnataka region.

Shivaraj (urasu)
Motivational Trainer

Koppal is a town in the koppal district in the indian state of karnataka. It is surrounded on three sides by hills and was an important town in the history of karnataka. and also known as 'Kopananagar'. It cantains historical locations such as koppal fort. gavimath (a religious shrine) and the male mallappa temple koppal is known as jaina kashi meaning the most scared place for jains, so named because there were more than too basadis (also called bastis) Jain Prarthana Mandirs. Koppal District was cavred out of raichur District, located in the northern pout of karnataka state, on 1st April, 1998.

Location in Karnataka

Country : India

Region : Hydrabad Karnataka

District : Koppal District

Area

Total : 28.78 Km2 (11.11 sq. mi)

Elevation : 529m (1.736ft.)

Population as per 2011

Total : 70698

■■■■